ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ನೇಪಾಳದಲ್ಲಿ ಸಂಭವಿಸಿದ್ದ ಭೀಕರ ಪ್ರವಾಹದಲ್ಲಿ ಮೃತಪಟ್ಟವರ ಸಂಖ್ಯೆ ಮಂಗಳವಾರ 1,003ಕ್ಕೆ ಏರಿಕೆಯಾಗಿದೆ. ಭದ್ರತಾ ಪಡೆಗಳು ದೇಶದ ಎಂಟು ಜಿಲ್ಲೆಗಳಲ್ಲಿ ಅನೇಕ ಮೃತದೇಹಗಳನ್ನು ಪತ್ತೆ ಮಾಡಿವೆ.

02 ಸೆಪ್ಟೆಂಬರ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -171 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಭಾರತ ಕಂಡ ಕಡು ಪ್ರಾಮಾಣಿಕ ಪ್ರಧಾನಿ ಶ್ರೀವಾಸ್ತವ್ ! » 2


ಪ್ರತಿ ವರ್ಷ ವಾಣಿಜ್ಯ ಬೆಳೆ ಸಮೀಕ್ಷೆ ಬೇಡ » 3


ಎತ್ತಿನಹೊಳೆ ಪರಿಹಾರ ವಿತರಣೆಯಲ್ಲಿ ತಾರತಮ್ಯ » 4

# ಮಾರ್ಗಸೂಚಿ ಅನ್ವಯ ಬರ ಘೋಷಣೆ

• ಪ್ರಜೋದಯ ವರದಿ

**ಬೆಂಗಳೂರು:** ಇಡೀ ರಾಜ್ಯವನ್ನೇ ಬರ ಪೀಡಿತವೆಂದು ಘೋಷಣೆ ಮಾಡಲು ಸಾಧ್ಯವಿಲ್ಲ. ಕೇಂದ್ರ, ರಾಜ್ಯ ಸರ್ಕಾರದ ಮಾರ್ಗಸೂಚಿ ಅನ್ವಯ ವೈಜ್ಞಾನಿಕವಾಗಿ ಪರಿಶೀಲನೆ ನಡೆಸಿದ ನಂತರ ಕ್ರಮ ಕೈಗೊಳ್ಳಲಾಗುವುದು. ಅಲ್ಲಿಯವರೆಗೆ ರೈತರು ತಾಳ್ಮೆಯಿಂದ ಇರಬೇಕೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಮಂಗಳವಾರ ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 101 ತಾಲ್ಲೂಕುಗಳನ್ನು ಮಾತ್ರ ಬರ ಪೀಡಿತವೆಂದು ಘೋಷಣೆ ಮಾಡಿರುವುದಕ್ಕೆ ರೈತರು, ಶಾಸಕರಲ್ಲಿ ಅಸಮಾಧಾನ ಇರುವುದು ನಿಜ. ಆದರೆ, ರಾಜಕೀಯವಾಗಿ ಈ ಬಗ್ಗೆ ತೀರ್ಮಾನ ಮಾಡಲು ಬರುವುದಿಲ್ಲವೆಂದು ತಿಳಿಸಿದರು.

ದೆಹಲಿಯಿಂದ ಬರುವ ಬರ



> ಕುಡಿಯುವ ನೀರಿಗೆ ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ 1 ಕೋ.ರೂ. ಅನುದಾನ ನೀಡಲಾಗಿದೆ. ಬರ ನಿರ್ವಹಣೆಗೆ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಹೆಚ್ಚುವರಿ ಹಣ ಇಡಲಾಗಿದೆ.
> -ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

### ಶೀಘ್ರ ಎರಡನೇ ಪಟ್ಟಿ ಬಿಡುಗಡೆ

ನಾವು ಮಾರ್ಗಸೂಚಿ ಅನುಸಾರ ಬರ ಪ್ರದೇಶ ಘೋಷಣೆ ಮಾಡಬೇಕು. ಅದರನ್ವಯ ಅಧ್ಯಯನ ಮಾಡಿ ಎರಡನೇ ಪಟ್ಟಿಯನ್ನು ಶೀಘ್ರವೇ ಘೋಷಣೆ ಮಾಡುತ್ತೇವೆ. ಜಿಲ್ಲಾ ಸಚಿವರು ಪ್ರತಿ ತಾಲ್ಲೂಕಿಗೆ ಭೇಟಿ ನೀಡಿ, ವಾಸ್ತವಾಂಶದ ವರದಿ ನೀಡಿದ್ದಾರೆ. ಅದರ ಜೊತೆಗೆ ಅಧಿಕಾರಿಗಳು ಅಧ್ಯಯನ ಮಾಡುತ್ತಿದ್ದಾರೆ. ಎರಡೂ ವರದಿ ಪರಿಶೀಲಿಸಿ ಕೇಂದ್ರಕ್ಕೆ ವರದಿ ಸಲ್ಲಿಸಬೇಕಿದೆ ಎಂದು ಮುಖ್ಯಮಂತ್ರಿ ವಿವರಿಸಿದರು.

ಅಧ್ಯಯನ ತಂಡಕ್ಕೆ ನಮ್ಮ ವರದಿ ಒಪ್ಪಿಗೆ ಆಗಬೇಕು. ಆಗ ಮಾತ್ರ ಕೇಂದ್ರ ಸರ್ಕಾರ ನೆರವು ನೀಡಲಿದೆ. ಕೇಂದ್ರ ತಂಡ ಯಾವುದಾದರೂ ತಾಲ್ಲೂಕಿಗೆ ಭೇಟಿ ನೀಡಿ ಪರಿಶೀಲಿಸಿ ಬರವಿಲ್ಲ, ತಪ್ಪು ವರದಿ ನೀಡಿದ್ದೀರಿ ಎಂದರೆ ಅದಕ್ಕೆ ಯಾರು ಜವಾಬ್ದಾರಿ ಎಂದು ಪ್ರಶ್ನಿಸಿದರು.

ನಮ್ಮ ಸಚಿವರು ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ವರದಿ ನೀಡಿದ್ದಾರೆ. ಆ ವರದಿ ಸರಿ ಇದೆಯೇ ಎಂದು ಅಧಿಕಾರಿಗಳು ಪರಿಶೀಲನೆ ಮಾಡುತ್ತಾರೆ. ಕೆಲವು ಕಡೆ ಹಸಿರು ಇದ್ದರೂ, ಬೆಳೆ ನಾಶವಾಗಿದೆ. ನನ್ನ ಕ್ಷೇತ್ರ ಕನಕಪುರದಲ್ಲೂ ಬರ ಇದೆ. ಆದರೂ ಅದು ಬರ ಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿಲ್ಲ. ನಾನು ಮುಖ್ಯಮಂತ್ರಿ ಆಗಿದ್ದರೂ ನಿಯಮ ಮೀರಿ ಬರ ಘೋಷಣೆ ಮಾಡಲು ಬರುವುದಿಲ್ಲ ಎಂದರು.

ಬರಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕವಾಗಿ ಪರಿಶೀಲನೆ ನಡೆಸಿ, ಕೇಂದ್ರ ಸರ್ಕಾರಕ್ಕೆ ವರದಿ ನೀಡಲಾಗುವುದು. ಈ ವಿಷಯದಲ್ಲಿ ವಿರೋಧ ಪಕ್ಷದವರೂ ಚರ್ಚೆ ಮಾಡಬೇಕು. ಆದರೆ, ಅವರು ಸದನದಲ್ಲಿ ಚರ್ಚೆ ನಡೆಸಿ, ಬರದ ಬಗ್ಗೆ ಗಮನ ಸೆಳೆಯಲಿಲ್ಲ. ಅವರಿಗೆ ರಾಜಕಾರಣವೇ ಮುಖ್ಯವಾಗಿದ್ದು, ರಾಜ್ಯ, ರೈತರ ಹಿತ ಅವರಿಗೆ ಬೇಕಿಲ್ಲ. ನಾನು ಮುಖ್ಯಮಂತ್ರಿ ಆಗಿರುವುದನ್ನು ಯಾವ ಪಕ್ಷದವರಿಗೂ ಸಹಿಸಿಕೊಳ್ಳಲು ಆಗುತ್ತಿಲ್ಲ. ಅವರ ಹೋರಾಟ ಯಶಸ್ವಿಯಾಗಲಿ ಎಂದು ಹೇಳಿದರು.

ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಚುರುಕಾಗಬೇಕು, ಜನರು ತಮ್ಮ ಸಮಸ್ಯೆಗಳಿಗೆ ಪರಿಹಾರಕ್ಕಾಗಿ ಅಲೆದಾಡುವುದನ್ನು ತಪ್ಪಿಸಲು ಪ್ರಜಾ ಸೇವಾ ಆಂದೋಲನ ಸೆ.5ರಿಂದ ಆರಂಭವಾಗುತ್ತಿದೆ. ಗ್ಯಾರಂಟಿ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಸರಿಯಾದ ರೀತಿಯಲ್ಲಿ ತಲುಪಬೇಕು. ದುರ್ಬಳಕೆ ಆಗಬಾರದು. ಅದಕ್ಕಾಗಿ ಮರುಪರಿಶೀಲನೆ

» ನಾಲ್ಕನೇ ಪುಟದಲ್ಲಿ

# ಪ್ರಸಾದ್ ಯೋಜನೆಗೆ ಶ್ರವಣಬೆಳಗೊಳ ಜೈನ ಮಠ ಸೇರಿಸಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಪ್ರಸಾದ್ ಯೋಜನೆಯಡಿ ಶ್ರವಣಬೆಳಗೊಳ ಶ್ರೀ ಕ್ಷೇತ್ರವನ್ನು ಸೇರಿಸಬೇಕೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಶಾಸಕ ಸಿ.ಎನ್.ಬಾಲಕೃಷ್ಣ ಅವರ ನೇತೃತ್ವದಲ್ಲಿ ಜೈನ ಮಠದ ವತಿಯಿಂದ ಮನವಿ ಸಲ್ಲಿಸಲಾಯಿತು.

ನವದೆಹಲಿಯಲ್ಲಿ ಸಚಿವರನ್ನು ಭೇಟಿ ಮಾಡಿದ ಮಠದ ಪ್ರತಿನಿಧಿಗಳು, ಹಿರೀಸಾವೆ, ಶ್ರವಣಬೆಳಗೊಳ ಹಾಗು ಚನ್ನರಾಯಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪಡಿಸುವುದು, ಕ್ಷೇತ್ರದ ಪ್ರವಾಸೋದ್ಯಮ ಅಭಿವೃದ್ಧಿಗೆ ಪ್ರಸಾದ್ ಯೋಜನೆಯಿಂದ ಅಗತ್ಯ ಮೂಲ ಸೌಕರ್ಯ ಕಲ್ಪಿಸುವುದು, ಶ್ರವಣಬೆಳಗೊಳದಲ್ಲಿ ನಿರ್ಮಾಣ ಗೊಳ್ಳುತ್ತಿರುವ ಪ್ರಾಕೃತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗು ಸಂಶೋಧನಾ ಚಟುವಟಿಕೆಗಳ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವಂತೆ ಮನವಿ ಮಾಡಿದರು.

ಮುಂಬರುವ ಮಹಾಮಸ್ತಕಾ ಭಿಷೇಕ ಮಹೋತ್ಸವ ಹಿನ್ನಲೆಯಲ್ಲಿ ಶ್ರವಣಬೆಳಗೊಳಕ್ಕೆ ದೇಶದ ವಿವಿಧ ಭಾಗಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಯಾತ್ರಾರ್ಥಿಗಳು ಆಗಮಿಸುತ್ತಾರೆ. ಈ ಹಿನ್ನಲೆಯಲ್ಲಿ ಬೆಂಗಳೂರು, ಹಾಸನ, ಮೈಸೂರು, ಮುಂಬೈ ಸೇರಿ ಪ್ರಮುಖ ನಗರಗಳಿಂದ ವಿಶೇಷ ರೈಲುಗಳ ಸಂಚಾರ ಕಲ್ಪಿಸಬೇಕು. ಶ್ರವಣಬೆಳಗೊಳ



ಭಾಗದ ಸಾವಿರಾರು ಜನರು ಮುಂಬೈಯಲ್ಲಿ ವ್ಯಾಪಾರ ವಹಿವಾಟು ಹಾಗು ಉದ್ಯೋಗಕ್ಕಾಗಿ ನೆಲೆಸಿರುವುದರಿಂದ ಅನುಕೂಲ ಮಾಡಿಕೊಡಬೇಕೆಂದು ಕೋರಿದರು.

ಸಚಿವ ಕುಮಾರಸ್ವಾಮಿ ಅವರು ಮಾತನಾಡಿ, ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ, ಶಿಕ್ಷಣ ಸಚಿವ ಪ್ರಹ್ಲಾದ್ ಜೋಶಿ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹಾಗು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರೊಂದಿಗೆ ಚರ್ಚಿಸುವ ಭರವಸೆ ನೀಡಿದರು. ಶ್ರವಣಬೆಳಗೊಳ ಜೈನ ಮಠದ ಪ್ರತಿನಿಧಿ ರಾಜೇಶ್ ಖನ್ನಾ ಇದ್ದರು.

# ರಾಹುಲ್ ವಿರುದ್ಧ ಎಫ್ಐಆರ್ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ಬಿಜೆಪಿ ಉದ್ದೇಶ ಪೂರ್ವಕವಾಗಿ ಎಫ್ಐಆರ್ ದಾಖಲಿಸಿ ಪ್ರಜಾಪ್ರಭುತ್ವಕ್ಕೆ ಧಕ್ಕೆ ತರುತ್ತಿದೆ ಎಂದು ಆರೋಪಿಸಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಜಿಲ್ಲಾಡಳಿತದ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು. ಉತ್ತರಾಖಂಡದ ಹಲದ್ವಾನಿಯಲ್ಲಿರುವ ರಾಮಲೀಲಾ ಮೈದಾನದಲ್ಲಿ ಇತ್ತೀಚೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಬಳಿಕ ಆ ಸ್ಥಳವನ್ನು ಹೋಮ-ಹವನದ ಮೂಲಕ ಶುದ್ಧೀಕರಣ ಮಾಡಲಾಗಿತ್ತು. ಆ ಮೂಲಕ ಬಿಜೆಪಿ ಇನ್ನೂ ಜಾತಿ ಪದ್ಧತಿ, ಅಸ್ಪೃಶ್ಯತೆಯನ್ನು ಜೀವಂತವಾಗಿಟ್ಟಿದೆ. ರಾಷ್ಟ್ರೀಯ ಪಕ್ಷದ ಅಧ್ಯಕ್ಷರೊಬ್ಬರಿಗೆ ಈ ರೀತಿ ಅವಮಾನ ಆಗಿರುವುದನ್ನು ಖಂಡಿಸಿ



ಸಂಸದ ರಾಹುಲ್ ಗಾಂಧಿ ಕಾನೂನು ಬದ್ಧ ವಿಚಾರಣೆಗೆ ಆಗ್ರಹಿಸಿದ್ದರು. ಸುದ್ದಿಗೋಷ್ಠಿ ಮೂಲಕ ಬಿಜೆಪಿಯ ಪ್ರಜಾಪ್ರಭುತ್ವ ವಿರೋಧಿ ನಡೆ ಪ್ರಶ್ನಿಸಿದ್ದಕ್ಕೆ ಅವರ ವಿರುದ್ಧ ಉತ್ತರಾಖಂಡ ಪೊಲೀಸರು ಎಫ್ಐಆರ್ ದಾಖಲಿಸಿದ್ದು, ಖಂಡನೀಯ ಎಂದರು.

ಡಾ.ಬಿ.ಆರ್.ಅಂಬೇಡ್ಕರ್ ಅವರ ಸಂವಿಧಾನ ಸರ್ವರಿಗೂ ಸಮಾನತೆ ಕರುಣಿಸಿದೆ. ಆದರೆ, ಬಿಜೆಪಿ ಇಂದಿಗೂ ಅಸ್ಪೃಶ್ಯತೆ ಆಚರಿಸುತ್ತಿದೆ. ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಖಂಡಿಸುವವರನ್ನು ಅಪರಾಧಿಗಳಂತೆ ಬಿಂಬಿಸಲಾಗುತ್ತಿದೆ. ಇದು ಸಂವಿಧಾನದ ಮೇಲೆ ನಡೆಯುತ್ತಿರುವ ದಾಳಿಯಾಗಿದ್ದು, ಕಾಂಗ್ರೆಸ್ ಈ ನೀತಿಯ ವಿರುದ್ಧ ನಿರಂತರ ಹೋರಾಟ ಮಾಡುತ್ತದೆಂದು ಎಚ್ಚರಿಕೆ ನೀಡಿದರು.

ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವಮಾನ ಮಾಡಿರುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ರಾಹುಲ್ ಗಾಂಧಿ ವಿರುದ್ಧ ದಾಖಲಾಗಿರುವ ಆಧಾರ ರಹಿತ ಎಫ್ಐಆರ್ ಅನ್ನು ರದ್ದುಪಡಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಇ.ಹೆಚ್.ಲಕ್ಷ್ಮಣ್, ಕಾರ್ಯಾಧ್ಯಕ್ಷ ಶಶಿಧರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು, ಮುಖಂಡರಾದ ರಘು ದಾಸರ ಕೊಪ್ಪಲು, ತಾರಾ ಚಂದನ್, ಮಂಜುನಾಥ್ ಶರ್ಮಾ ಮತ್ತಿತರರಿದ್ದರು.

# ಸರ್ವರ್ ಕಿರಿಕಿರಿ: ದಿನವಿಡೀ ಕಾದರೂ ಆಗುತ್ತಿಲ್ಲ ಇ-ಕೆವೈಸಿ

## ಕೂಲಿ ಕೆಲಸ ಬಿಟ್ಟು ನ್ಯಾಯಬೆಲೆ ಅಂಗಡಿ ಎದುರು ಫಲಾನುಭವಿಗಳ ಪರದಾಟ

• ಪ್ರಜೋದಯ ವರದಿ

**ಹಾಸನ:** ಪಡಿತರ ಚೀಟಿದಾರರು ಪ್ರತಿ ಐದು ವರ್ಷಕ್ಕೊಮ್ಮೆ ಇ-ಕೆವೈಸಿ ಮಾಡಿಸುವುದು ಕಡ್ಡಾಯಗೊಳಿಸಿರುವುದರಿಂದ ಗ್ರಾಹಕರು ತುರ್ತಾಗಿ ಕೆವೈಸಿ ಮಾಡಿಸಬೇಕಿದೆ. ಆದರೆ, ಇ-ಕೆವೈಸಿ ಮಾಡಿಸಲು ಮುಂದಾದವರಿಗೆ ಸರ್ವರ್ ಸಮಸ್ಯೆ ತೀವ್ರವಾಗಿ ಕಾಡುತ್ತಿದೆ.

ಜಿಲ್ಲೆಯಲ್ಲಿ ಐದು ವರ್ಷ ಮೇಲ್ಪಟ್ಟ ಸಾವಿರಾರು ಪಡಿತರ ಚೀಟಿದಾರರಿದ್ದಾರೆ. ಪ್ರತಿಯೊಬ್ಬ ಗ್ರಾಹಕರು ನ್ಯಾಯಬೆಲೆ ಅಂಗಡಿಗೆ ತೆರಳಿ ಬೆರಳಚ್ಚು ಕಡ್ಡಾಯವಾಗಿ ನೀಡಬೇಕಿದೆ. ಇಲ್ಲದಿದ್ದರೆ ಪಡಿತರ ಚೀಟಿಯಿಂದ ಹೆಸರು ಬಿಟ್ಟು ಹೋಗುವ ಆತಂಕ ಎದುರಾಗಿರುವುದರಿಂದ ಜನರು ತಮ್ಮ ದಿನನಿತ್ಯದ ಕೆಲಸ-ಕಾರ್ಯಗಳನ್ನು ಬಿಟ್ಟು ನ್ಯಾಯಬೆಲೆ ಅಂಗಡಿಗಳ ಮುಂದೆ ಸರದಿ ಸಾಲಿನಲ್ಲಿ ನಿಲ್ಲುವಂತಾಗಿದೆ. ಗಂಟೆಗಟ್ಟಲೆ ಸರದಿಯಲ್ಲಿ ನಿಂತರೂ ಪ್ರಕ್ರಿಯೆ ಪೂರ್ಣಗೊಳ್ಳದೆ ನಿರಾಸೆಯಿಂದ ಹಿಂದಿರುಗುವ ಪರಿಸ್ಥಿತಿ ನಿರ್ಮಾಣವಾಗಿದೆ.



ಜಿಲ್ಲೆಯ ವಿವಿಧೆಡೆ ಇ-ಕೆವೈಸಿಗಾಗಿ ಜನರು ಬೆಳಿಗ್ಗೆಯೇ ನ್ಯಾಯಬೆಲೆ ಅಂಗಡಿಗಳ ಮುಂದೆ ಜನರು ಸಾಲುಗಟ್ಟಿ ನಿಲ್ಲುತ್ತಿದ್ದಾರೆ. ಸರ್ವರ್ ಕೈಕೊಟ್ಟ ಪರಿಣಾಮ ದಿನವಿಡಿ ಕಾದು ಕುಳಿತುಕೊಳ್ಳಬೇಕಾದ ಸ್ಥಿತಿ ಎದುರಾಗಿದೆ. ಕೆಲವರು ಎಷ್ಟೂರು ಬಾರಿ ನ್ಯಾಯಬೆಲೆ ಅಂಗಡಿಗೆ ಅಲೆದಾಡಿದರೂ ಪೂರ್ಣಗೊಳ್ಳುತ್ತಿಲ್ಲ.

ಇ-ಕೆವೈಸಿ ಮಾಡಿಸಿಕೊಳ್ಳಲು ಈಗಾಗಲೇ ಸಂಬಂಧಪಟ್ಟ ಗ್ರಾಹಕರಿಗೆ ಸೂಚಿಸಿ ದಿನಾಂಕ ನಿಗದಿಪಡಿಸಿ ಟೋಕನ್ ನೀಡಲಾಗಿದೆ. ಆದರೆ, ನಿಗದಿತ ಸಮಯಕ್ಕೆ ತೆರಳಿದರೂ ಸರ್ವರ್ ಸಮಸ್ಯೆಯಿಂದ ಗ್ರಾಹಕರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಪಡಿತರ ಚೀಟಿದಾರರು ತಮ್ಮ ಹೆಸರು ಬಾಕಿ ಪಟ್ಟಿಯಲ್ಲಿದೆಯೇ

> **ಸೆ.30ರೊಳಗೆ ಪೂರ್ಣಗೊಳಿಸಲು ಸೂಚನೆ**
>
> ಜಿಲ್ಲೆಯ ವ್ಯಾಪ್ತಿಯಲ್ಲಿ ಐದು ವರ್ಷಕ್ಕಿಂತ ಮೇಲ್ಪಟ್ಟ ಅವಧಿಯಿಂದ ಇ-ಕೆವೈಸಿ ಬಾಕಿ ಇರುವ ಎಲ್ಲಾ ಪಡಿತರ ಚೀಟಿದಾರರು ಸೆ.30ರೊಳಗೆ ಪ್ರಕ್ರಿಯೆ ಪೂರ್ಣಗೊಳಿಸಿಕೊಳ್ಳುವಂತೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸೂಚಿಸಿದೆ. ಆದರೆ, ಸರ್ವರ್ ಇಲ್ಲದೆ ಅಲೆದಾಡುವಂತಾಗಿದೆ.

ಎಂಬುದನ್ನು ನ್ಯಾಯಬೆಲೆ ಅಂಗಡಿಯಲ್ಲಿ ಪರಿಶೀಲಿಸಿಕೊಂಡು ಇ-ಕೆವೈಸಿ ಮಾಡಿಸಿಕೊಳ್ಳಬಹುದಾಗಿದೆ. ಇಲಾಖೆಯ ಸೂಚನೆಯಂತೆ ಈ ಪ್ರಕ್ರಿಯೆ ಉಚಿತವಾಗಿದ್ದು, ಶುಲ್ಕ ಪಾವತಿಸುವ ಅಗತ್ಯವಿಲ್ಲ.

**ಜನರಿಂದ ಅಸಮಾಧಾನ**

ಇ-ಕೆವೈಸಿ ಕಡ್ಡಾಯವಾಗಿರುವುದರಲ್ಲಿ ಇಲಾಖೆಯ ಸೂಚನೆಯಂತೆ ನ್ಯಾಯಬೆಲೆ ಅಂಗಡಿಗೆ ತೆರಳಿದ ಬಳಿಕ ತಾಂತ್ರಿಕ ಸಮಸ್ಯೆಯಿಂದ ಪ್ರಕ್ರಿಯೆ ಪೂರ್ಣಗೊಳ್ಳದಿರುವುದು ಜನರ ಅಸಮಾಧಾನಕ್ಕೆ ಕಾರಣವಾಗಿದೆ.

ಒಂದು ದಿನದ ಕೂಲಿ ಬಿಟ್ಟು ಬಂದಿದ್ದೇವೆ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಕಾದರೂ ಸರ್ವರ್ ಬರಲಿಲ್ಲ. ಮತ್ತೊಂದು ದಿನ ಕೆಲಸ ಬಿಟ್ಟು ಬರಬೇಕಾದರೆ ಕೂಲಿ ನಷ್ಟವಾಗುತ್ತದೆ ಎನ್ನುವುದು ಕಾರ್ಮಿಕರ ಅಳಲಾಗಿದೆ.

ಹೀಗಾಗಿ ಇ-ಕೆವೈಸಿ ಗಡುವಿನೊಳಗೆ ಪೂರ್ಣಗೊಳಿಸಲು ಇಲಾಖೆ ಸೂಚಿಸಿರುವುದರ ಜೊತೆಗೆ, ನ್ಯಾಯಬೆಲೆ ಅಂಗಡಿಗಳಲ್ಲಿ ಉಂಟಾಗುತ್ತಿರುವ ಸರ್ವರ್ ಸಮಸ್ಯೆಯನ್ನು ತ್ವರಿತವಾಗಿ ಪರಿಹರಿಸಬೇಕು. ಸರ್ವರ್ ಕೈಕೊಟ್ಟಾಗ ಫಲಾನುಭವಿಗಳು ಪದೇಪದೇ ಅಂಗಡಿಗೆ ಅಲೆದಾಡದಂತೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕೆಂಬ ಒತ್ತಾಯವೂ ಕೇಳಿಬರುತ್ತಿದೆ.

# ವಡ್ಡರಹಳ್ಳಿಯಲ್ಲಿ ಬೋನಿಗೆ ಬಿದ್ದ ಚಿರತೆ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ವಡ್ಡರಹಳ್ಳಿ ಗ್ರಾಮದಲ್ಲಿ ಇಟ್ಟಿದ್ದ ಬೋನಿನಲ್ಲಿ ಚಿರತೆ ಸೆರೆಯಾಗಿದೆ.

ತಾಲ್ಲೂಕಿನ ವಡ್ಡರಹಳ್ಳಿ, ರುದ್ರಪಟ್ಟಣ, ಹನ್ಯಾಳು, ಮತ್ತಿಗೋಡು, ಜೆ.ಹೊಸಹಳ್ಳಿ ಸೇರಿ ಸುತ್ತಮುತ್ತಲಿನ ಗ್ರಾಮಗಳಲ್ಲಿ ಕಳೆದ ಕೆಲ ದಿನಗಳಿಂದ ಚಿರತೆ ಸಂಚಾರ ಕಂಡುಬಂದಿತ್ತು. ಚಿರತೆ ಕುರಿ, ಕರು ಹಾಗು ನಾಯಿಗಳನ್ನು ಹೊತ್ತೊಯ್ದು ತಿಂದು ಹಾಕುತ್ತಿದ್ದರಿಂದ ಗ್ರಾಮಸ್ಥರು ಆತಂಕಕ್ಕೊಳಗಾಗಿದ್ದರು. ಅಲ್ಲದೆ ಹಗಲು ವೇಳೆಯಲ್ಲಿಯೇ ರೈತರ ಜಮೀನುಗಳಲ್ಲಿ ಚಿರತೆ ಕಾಣಿಸಿಕೊಳ್ಳುತ್ತಿದ್ದ ಹಿನ್ನಲೆ ಜನರು ಜಮೀನುಗಳಿಗೆ ತೆರಳಲು ಭಯಪಡುವಂತಾಗಿತ್ತು.

ಗ್ರಾಮಸ್ಥರು ಚಿರತೆಯನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸುವಂತೆ ಅರಣ್ಯ ಇಲಾಖೆಗೆ ಒತ್ತಾಯಿಸಿದ್ದರು.



ಮನವಿಗೆ ಸ್ಪಂದಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಚಿರತೆಯ ಅದು ಸಂಚರಿಸುತ್ತಿದ್ದ ಸ್ಥಳದಲ್ಲಿ ಬೋನು ಇರಿಸಿದ್ದು, ಅಂತಿಮವಾಗಿ ಚಿರತೆ ಬೋನಿಗೆ ಬಿದ್ದಿದೆ. ಅರಣ್ಯ ಇಲಾಖೆ ಸಿಬ್ಬಂದಿ ಪರಿಶೀಲನೆ ನಡೆಸಿದರು. ಸೆರೆ ಸಿಕ್ಕಿರುವ ಚಿರತೆಯನ್ನು ಸುರಕ್ಷಿತವಾಗಿ ಬೇರೆಡೆಗೆ ಸ್ಥಳಾಂತರಿಸಲು ಅರಣ್ಯ ಇಲಾಖೆ ಮುಂದಾಗಿದ್ದಾರೆ.

# ಹಳ್ಳಿಮೈಸೂರು : ಸಂಸದರಿಂದ ಅಹವಾಲು ಸ್ವೀಕಾರ

• ಪ್ರಜೋದಯ ವರದಿ

**ಹೊಳೆನರಸೀಪುರ :** ತಾಲ್ಲೂಕಿನ ಹಳ್ಳಿಮೈಸೂರು ಗ್ರಾಮ ಪಂಚಾಯಿತಿ ಆವರಣದಲ್ಲಿ ಮಂಗಳವಾರ ಸಂಸದ ಶ್ರೇಯಸ್ ಪಟೇಲ್ ಅವರು ಹೋಬಳಿ ಮಟ್ಟದ ಸಾರ್ವಜನಿಕರ ಕುಂದುಕೊರತೆ ಸ್ವೀಕಾರ ಸಭೆ ನಡೆಸಿದರು.

ಹೋಬಳಿಯ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ರೈತರು ಹಾಗು ಸಾರ್ವಜನಿಕರು ಕೃಷಿ, ನೀರಾವರಿ, ರಸ್ತೆ, ಕುಡಿಯುವ ನೀರು, ವಿದ್ಯುತ್, ವಸತಿ, ಕಂದಾಯ, ಪಿಂಚಣಿ, ಸರ್ಕಾರಿ ಸೌಲಭ್ಯ ಹಾಗು ಗ್ರಾಮೀಣಾಭಿವೃದ್ಧಿ ಸೇರಿ ಹಲವು ಸಮಸ್ಯೆಗಳನ್ನು ಸಂಸದರ ಗಮನಕ್ಕೆ ತಂದರು.

ಪ್ರತಿಯೊಬ್ಬರ ಅಹವಾಲುಗಳನ್ನು ಆಲಿಸಿದ ಸಂಸದರು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳದಲ್ಲಿಯೇ ಚರ್ಚಿಸಿ ಸಮಸ್ಯೆಗಳಿಗೆ ಆದ್ಯತೆಯ



ಮೇರೆಗೆ ಸೂಕ್ತ ಪರಿಹಾರ ಕಲ್ಪಿಸಬೇಕು. ಜಿಲ್ಲಾ ಹಾಗು ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದು, ಸಾರ್ವಜನಿಕರಿಂದ ಸ್ವೀಕರಿಸಲಾದ ಅಹವಾಲುಗಳನ್ನು ಪರಿಶೀಲಿಸಿ ತಮ್ಮ ವ್ಯಾಪ್ತಿಯ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸುವಂತೆ ಸಂಸದರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸರ್ಕಾರದ ವಿವಿಧ ಯೋಜನೆಗಳು ಹಾಗು ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ಸಮರ್ಪಕವಾಗಿ ತಲುಪಬೇಕು. ಗ್ರಾಮೀಣ ಪ್ರದೇಶಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಸೂಚಿಸಲಾಯಿತು.

# ಬರ ಘೋಷಣೆಯಲ್ಲಿ ಸರ್ಕಾರ ತಾರತಮ್ಯ : ಆರೋಪ

• ಪ್ರಜೋದಯ ವರದಿ

**ಹಾಸನ:** ಬರಪೀಡಿತ ಪ್ರದೇಶಗಳ ಘೋಷಣೆ ಮಾಡುವಲ್ಲಿ ಕಾಂಗ್ರೆಸ್ ಸರ್ಕಾರ ತಾರತಮ್ಯ ಮಾಡುತ್ತಿದೆ ಎಂದು ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಬಿ.ಹೆಚ್. ನಾರಾಯಣ ಗೌಡ ಅವರು ಆರೋಪಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಐದು ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ. ಆದರೆ, ಆಲೂರು-ಬೇಲೂರು ತಾಲ್ಲೂಕನ್ನು ಬರಪೀಡಿತ ಪಟ್ಟಿಯಿಂದ ಕೈ ಬಿಡಲಾಗಿದೆ. ಮಳೆಯಾಶ್ರಿತ ಸಕಲೇಶಪುರ ತಾಲ್ಲೂಕಿನಲ್ಲೂ ಮಳೆಯ ಕೊರತೆಯಿಂದ ಬೆಳೆಗಳು ಸಂಪೂರ್ಣ ಹಾನಿಗೊಳಗಾಗಿವೆ ಎಂದು ತಿಳಿಸಿದರು.

ಜಿಲ್ಲೆಯಾದ್ಯಂತ ಜೋಳ, ರಾಗಿ ಸೇರಿ ವಿವಿಧ ಬೆಳೆಗಳು ಹಾನಿಯಾಗಿ




ದ್ದು, ಕೆರೆ-ಕಟ್ಟೆಗಳ ಲ್ಲಿಯೂ ಜಾನುವಾರುಗಳಿಗೆ ಕುಡಿಯಲು ನೀರಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ ಸರ್ಕಾರ ಕೂಡಲೇ ವಿಶೇಷ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಭೀಕರ ಬರ ಪರಿಸ್ಥಿತಿ ಎದುರಾಗಿದ್ದರೂ ಕಾಂಗ್ರೆಸ್ ಸರ್ಕಾರ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರ ಸರ್ಕಾರದತ್ತ ಬೆರಳು ತೋರಿಸುತ್ತಾ ತಾಂತ್ರಿಕ ಕಾರಣ ಮುಂದಿಡುತ್ತಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆ ಪ್ರಮಾಣ ಗಣನೀಯವಾಗಿ ಕುಸಿದಿದೆ. ಕೆಲವೆಡೆ ಶೇ.50ಕ್ಕೂ ಕಡಿಮೆ ಮಳೆಯಾಗಿದ್ದು, ತಾಪಮಾನ 30 ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚಾಗಿದೆ. ಬಿತ್ತನೆ ಪ್ರಮಾಣವೂ ಶೇ.40ರಷ್ಟಿದ್ದು, ನಿರೀಕ್ಷಿತ ಪ್ರಮಾಣದಲ್ಲಿ ಬೆಳೆ ಬಂದಿಲ್ಲ. ಆದರೆ, ಈ ಬಗ್ಗೆ ಕೃಷಿ ಸಚಿವರು ಹಾಗು ಕೃಷಿ ಇಲಾಖೆಯ

» ನಾಲ್ಕನೇ ಪುಟದಲ್ಲಿ

# ಹಣಕಾಸು ವೈಷಮ್ಯ : ವ್ಯಕ್ತಿ ಕೊಲೆಯಲ್ಲಿ ಅಂತ್ಯ

• ಪ್ರಜೋದಯ ವರದಿ

**ಅರಸೀಕೆರೆ :** ಸಾಲವಾಗಿ ಕೊಟ್ಟಿದ್ದ ಹಣವನ್ನು ಕೇಳಿದ್ದಕ್ಕೆ ದಂಪತಿ ವ್ಯಕ್ತಿಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಕೊಲೆ ಮಾಡಿರುವ ಘಟನೆ ತಾಲ್ಲೂಕಿನ ಜೆ.ಸಿ.ಪುರದಲ್ಲಿ ಸೋಮವಾರ ನಡೆದಿದೆ.

ಗ್ರಾಮದ ನಜ್ಮಾ ಬಾನು ಅವರ ಪತಿ ಮನ್ಸೂರ್ ಪಾಷಾ ಮೃತರು. ಸನಾವುಲ್ಲಾ ಹಾಗು ಜರೀನಾ ಬಾನು ಕೊಲೆ ಆರೋಪಿಗಳು. ಸ್ನೇಹಿತ ಸನಾವುಲ್ಲಾಗೆ ಮನ್ಸೂರ್ ಪಾಷ ಒಂದು ವರ್ಷದ ಹಿಂದೆ 40 ಲ.ರೂ. ಸಾಲ ನೀಡಿದ್ದರು ಎನ್ನಲಾಗಿದೆ. ಅದೇ ಗ್ರಾಮದಲ್ಲಿ ಮೃತರ ಪತ್ನಿ ನಜ್ಮಾ ಅವರ ಅಕ್ಕ ಆಸೀಯಾ ತಬಸುಂ ವಾಸವಿದ್ದು, ಮನ್ಸೂರ್ ಪಾಷ ಆಗಾಗ ಅಲ್ಲಿಗೆ ಬರುತ್ತಿದ್ದ. ಅವರ ಮನೆ ಹತ್ತಿರದಲ್ಲೇ ಇದ್ದ ಸನಾವುಲ್ಲಾ ಮನೆಗೆ ತೆರಳಿ ಸಾಲದ ಹಣ ಕೊಡುವಂತೆ ಕೇಳುತ್ತಿದ್ದ. ಹಲವು ದಿನಗಳಿಂದ ಹಣಕಾಸಿನ ವಿಚಾರವಾಗಿ ಇಬ್ಬರ ನಡುವೆ ವಾಗ್ವಾದ ನಡೆಯುತ್ತಿತ್ತು ಎಂದು ತಿಳಿದುಬಂದಿದೆ.

ಸೋಮವಾರ ಮಧ್ಯಾಹ್ನ

» ನಾಲ್ಕನೇ ಪುಟದಲ್ಲಿ

## ದಿವ್ಯ ಸಂಜೆ ಸಂವಾದದಲ್ಲಿ ಸದ್ಗುರು ಶ್ರೀ ಮಧುಸೂದನ ಸಾಯಿ ಅಭಿಮತ

# ಮಕ್ಕಳ ವರ್ತನೆಯು ಮಾನವ ವಿಕಾಸದ ಭಾಗ

• ಪ್ರಜೋದಯ ವರದಿ

**ಹಾಸನ:** ಈಗಿನ ಕಾಲದ ಮಕ್ಕಳಿಗೆ ಎಲ್ಲವೂ ಬೇಗ ಅರ್ಥವಾಗುತ್ತದೆ. ಅವರ ವರ್ತನೆಯು ನಿರಂತರ ಮಾನವ ವಿಕಸನದ ಒಂದು ಭಾಗ. ಅವರು ಬದಲಾಗಲು ಸಾಧ್ಯವಿಲ್ಲ, ಶಿಕ್ಷಕರು ಮತ್ತು ಪೋಷಕರು ಅದನ್ನು ಅರ್ಥಮಾಡಿಕೊಂಡು ಬದಲಾಗಬೇಕಿದೆ ಎಂದು ಸದ್ಗುರು ಶ್ರೀ ಮಧುಸೂದನ ಸಾಯಿ ಹೇಳಿದರು.

ನಗರದ ನಂದಗೋಕುಲ ಕನ್ವೆನ್ಷನ್ ಹಾಲ್‌ನಲ್ಲಿ ಮಂಗಳವಾರ ನಡೆದ ದಿವ್ಯ ಸಂಜೆ ಸಂವಾದದಲ್ಲಿ ಪತ್ರಕರ್ತ ಸುದರ್ಶನ ಚನ್ನಂಗಿಹಳ್ಳಿ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಈಗಿನ ಮಕ್ಕಳಿಗೆ ಭಯ ಇಲ್ಲ. 15 ನಿಮಿಷಗಳಿಗಿಂತಲೂ ಹೆಚ್ಚಿನ ಏಕಾಗ್ರತೆ ಅವರಲ್ಲಿ ನಿಲ್ಲುವುದು ಕಷ್ಟ. ಅವರು ಹೆಚ್ಚು ಪ್ರಶ್ನೆಗಳನ್ನು ಕೇಳುತ್ತಾರೆ. ಅವರ ಮನಸ್ಸು ಅರ್ಥ ಮಾಡಿಕೊಂಡು ನಾವು ಸಮಾಧಾನದಿಂದ ಉತ್ತರಿಸಿದರೆ ಬದಲಾವಣೆ ಖಂಡಿತ ಸಾಧ್ಯವಿದೆ ಎಂದರು.

ಮಕ್ಕಳನ್ನು ಬೆಳೆಸಲು ಪೋಷಕರು ಹೆಚ್ಚು ಗಮನಕೊಡುತ್ತಿಲ್ಲ ಎನ್ನುವುದು ವಿಷಾದಕರ ಸತ್ಯ. ಶಿಕ್ಷಕರೂ ಅಷ್ಟೇ, ಕೇವಲ ತರಗತಿಯ ಪಾಠದಿಂದ ಕಲಿಕೆ ಸಾಧ್ಯವಿಲ್ಲ ಎನ್ನುವುದನ್ನು



ಅರಿತುಕೊಳ್ಳಬೇಕು. ನನ್ನ ಪ್ರಕಾರ ಬದಲಾಗಬೇಕಿರುವುದು ಮಕ್ಕಳಲ್ಲ, ಪೋಷಕರು ಮತ್ತು ಶಿಕ್ಷಕರೆಂದು ಅಭಿಪ್ರಾಯಪಟ್ಟರು.

ಸಮಾಜದಲ್ಲಿ ಬದಲಾವಣೆ ಬರಲು ಶಿಕ್ಷಣ ವ್ಯವಸ್ಥೆ ಸುಧಾರಿಸಬೇಕು. ಇದು ಸಾಧ್ಯವಾಗಲು ನೀತಿ ಪಾಠ ಮತ್ತೆ ಶಿಕ್ಷಣ ವ್ಯವಸ್ಥೆಯ ಭಾಗವಾಗಬೇಕು. ಶಾಲಾ ಚಟುವಟಿಕೆಗಳಲ್ಲಿ ಪೋಷಕರು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ವಿಶ್ವವಿದ್ಯಾಲಯಗಳಲ್ಲಿ ಕೌಶಲ ಆಧರಿತ ಶಿಕ್ಷಣಕ್ಕೆ ಒತ್ತು ಸಿಗಬೇಕು. ಇಂದಿನ ಉದ್ಯೋಗಿಗಳ ಪೈಕಿ ಶೇ. 92 ರಷ್ಟು ಮಂದಿಯ ಓದಿಗೂ- ಕೆಲಸಕ್ಕೂ ಸಂಬಂಧವೇ ಇಲ್ಲವೆಂದು ವಿವರಿಸಿದರು.

ವೈವಿಧ್ಯತೆ ನಮ್ಮ ದೇಶದ ನಿಜವಾದ ಶಕ್ತಿ. ಇಂಥ ದೇಶ ಜಗತ್ತಿನಲ್ಲಿ ಎಲ್ಲಿಯೂ ಇಲ್ಲ. ಹಲವು ಆಕ್ರಮಣಗಳ ನಂತರವೂ ದೇಶದಲ್ಲಿ ಅಧ್ಯಾತ್ಮ ಮರೆಯಾಗಲಿಲ್ಲ. ಪ್ರಗತಿಯ ಅರ್ಥವನ್ನು ಸರಿಯಾಗಿ ವ್ಯಾಖ್ಯಾನಿಸಬೇಕು. ರಾವಣನಂತಹ ರಾಕ್ಷಸ ಸ್ವರ್ಣಲಂಕೆ ನಿರ್ಮಿಸಿಕೊಂಡಿದ್ದ. ಅದನ್ನು ಪ್ರಗತಿ ಎನ್ನಲು ಸಾಧ್ಯವೇ. ಇಂದಿಗೂ ಜನರು ರಾಮರಾಜ್ಯವನ್ನಷ್ಟೇ ನೆನಪಿಸಿಕೊಳ್ಳುತ್ತಾರೆ. ಸರ್ವಾಂಗೀಣ ಪ್ರಗತಿಗೆ ನಾವು ಒತ್ತು ಕೊಡಬೇಕೆಂದರು.

**ಜೀವನ ಶಿಕ್ಷಣ ಕೊಟ್ಟ ಸಂಸ್ಥೆ**

ಶ್ರೀ ಸತ್ಯ ಸಾಯಿ ಗುರುಕುಲಂ ಸಮೂಹ ಶಿಕ್ಷಣ ಸಂಸ್ಥೆಗಳ ಹಿರಿಯ ವಿದ್ಯಾರ್ಥಿ, ಅರಸೀಕೆರೆ ತಾಲ್ಲೂಕಿನ ಕೆ.ಎಂ.ಮೋಹನ್ ಕುಮಾರ್ ಅವರು ಮಾತನಾಡಿ, ಅತ್ಯಂತ ಬಡ ಕುಟುಂಬದಿಂದ ಬಂದವನು ನಾನು. ಉನ್ನತ ಶಿಕ್ಷಣವು ನನ್ನ ಪಾಲಿಗೆ ಕನಸಷ್ಟೇ ಆಗಿತ್ತು. ಆದರೆ ಇಂದು ಸಂಸ್ಥೆಯು ನನಗೆ ಸರ್ವವನ್ನೂ ಕೊಟ್ಟಿದೆ. ನಿಸ್ವಾರ್ಥ ಸೇವೆ, ದೇಶಭಕ್ತಿ ಮತ್ತು ಸಮಾಜ ಸೇವೆಯ ಮನೋಭಾವ ರೂಪಿಸಿದೆ. ಅದಕ್ಕೂ ಮಿಗಿಲಾಗಿ ಒಬ್ಬ ನಾಯಕನನ್ನಾಗಿ ಬೆಳೆಸುತ್ತಿದೆ ಎಂದು ವಿವರಿಸಿದರು.

ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವೇದ ಘೋಷದೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶಾಸಕ ಹೆಚ್.ಕೆ.ಸುರೇಶ್, ಕೊಡಗು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಅಶೋಕ್ ಆಲೂರು, ಹಾಸನ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ತಾರಾನಾಥ್, ಪ್ರಶಾಂತಿ ಬಾಲಮಂದಿರ ಟ್ರಸ್ಟ್ ಅಧ್ಯಕ್ಷ ಡಾ ಬಿ.ಎನ್ .ನರಸಿಂಹಮೂರ್ತಿ ಉಪಸ್ಥಿತರಿದ್ದರು. ಟಿ.ಸಿ.ಪ್ರವೀಣ್ ಕುಮಾರ್ ನಿರೂಪಿಸಿದರು.

### ಸೇವಾಯಜ್ಞಕ್ಕೆ ಎಲ್ಲರೂ ಕೈಜೋಡಿಸೋಣ

ಗೌರಿಗದ್ದೆಯ ಅವಧೂತ ವಿನಯ್ ಗುರೂಜಿ ಪ್ರಾಸ್ತಾವಿಕವಾಗಿ ಮಾತನಾಡಿ, ಸದ್ಗುರು ಶ್ರೀ ಮಧುಸೂದನ ಸಾಯಿ ಅವರು ಒಂದು ಮಠ, ಮಂದಿರದ ಚೌಕಟ್ಟು ಹಾಕಿಕೊಂಡು ಆರಾಮಾಗಿ ಇರಬಹುದು. ಆದರೆ ಅವರು ಕಳೆದ 12 ವರ್ಷಗಳಿಂದ ಅಕ್ಷರಶಃ ಹಗಲಿರುಳು ಶ್ರಮಿಸುತ್ತಿದ್ದಾರೆ. ಅದು ಯಜ್ಞ, ಕೇವಲ ಒಂದು ಬದುಕು ಅಲ್ಲವೆಂದು ವಿವರಿಸಿದರು.

ಮುದ್ದೇನಹಳ್ಳಿಯಲ್ಲಿ ಸದ್ಗುರುಗಳು ಮಕ್ಕಳ ಮಿದುಳು ವಿಕಾಸಗೊಳಿಸುವ ಕೆಲಸ ಮಾಡುತ್ತಿದ್ದಾರೆ. ರಾಜಕೀಯದ ಅಧಿಕಾರಕ್ಕೆ ಅವಧಿ ಇರಬಹುದು ಆದರೆ ಧರ್ಮಕ್ಕೆ ಎಂದಿಗೂ ಅವಧಿ ಇರುವುದಿಲ್ಲ. ಭಾರತೀಯ ಪರಂಪರೆಯು ದಾನಕ್ಕೆ ಹೆಚ್ಚು ಒತ್ತು ಕೊಟ್ಟಿದೆ. ಹೀಗಾಗಿ ಮುದ್ದೇನಹಳ್ಳಿಯಲ್ಲಿ ಹೂಡಿಕೆ ಮತ್ತು ಪ್ರತಿಫಲ ಎನ್ನುವ ಲೆಕ್ಕಾಚಾರ ಇಲ್ಲ. ಅಲ್ಲಿ ವಿದ್ಯೆಯ ಮೂಲಕ ಸಮಾಜ ಪರಿವರ್ತನೆಯ ಮಹಾನ್ ಕೆಲಸ ನಡೆಯುತ್ತಿದೆ ಎಂದರು.

ಸದ್ಗುರುಗಳಿಂದ ಸಂಸ್ಕಾರ ಪಡೆದ ಮಕ್ಕಳು ಸಕ್ರಿಯರಾಗಿ ಕೆಲಸ ಆರಂಭಿಸಿದ ನಂತರ ಇಡೀ ಜಗತ್ತು ಹೇಗೆ ಬದಲಾಗುತ್ತದೆ ಎನ್ನುವುದನ್ನು ನೋಡಲು ನಾನು ಕಾಯುತ್ತಿದ್ದೇನೆ. ಮಕ್ಕಳಿಗೆ ಆಶ್ರಯ, ಆರೋಗ್ಯ ಮತ್ತು ಅಕ್ಷರದ ಜೊತೆಗೆ ಪರಿಸರ ಹಾಗು ರಾಷ್ಟ್ರಭಕ್ತಿಯನ್ನೂ ಸ್ವಾಮಿ ಕಲಿಸುತ್ತಿದ್ದಾರೆಂದರು.

# 4,744 ಹುದ್ದೆ ಭರ್ತಿಗೆ ಶೀಘ್ರ ಅಧಿಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಪದವಿ ಹಾಗು ಪಿಯುಸಿ-ತತ್ಸಮಾನ ವಿದ್ಯಾರ್ಹತೆ ಹೊಂದಿರುವ 4,744 ಹುದ್ದೆ ನೇಮಕಾತಿಗೆ ಶೀಘ್ರ ಅಧಿಸೂಚನೆ ಹೊರಡಿಸಲಾಗುವುದೆಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್. ಪ್ರಸನ್ನ ಅವರು ತಿಳಿಸಿದ್ದಾರೆ.

ನವೆಂಬರ್ ಹಾಗು ಡಿಸೆಂಬರ್‌ನಲ್ಲಿ ಲಿಖಿತ ಪರೀಕ್ಷೆ ನಡೆಸಲಾಗುವುದು. ಯಾವ ಇಲಾಖೆಯ ಯಾವ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು ಎಂಬುದರ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಪದವಿ ಮಟ್ಟದ ತಾಂತ್ರಿಕೇತರ ಹುದ್ದೆಗಳು 2,421 ಹಾಗು ಪಿಯುಸಿ ಮಟ್ಟದ ತಾಂತ್ರಿಕೇತರ ಹುದ್ದೆಗಳು 2,062 ಇವೆ. ತಾಂತ್ರಿಕ ಹುದ್ದೆಗಳು 261 ಇದ್ದು, ನಂತರದ ದಿನಗಳಲ್ಲಿ ಇನ್ನೂ ಹೊಸ ಇಲಾಖೆ ಮತ್ತು ಹುದ್ದೆಗಳು ಸೇರುವ ಸಾಧ್ಯತೆ ಇದೆ ಎಂದು ಮಾಹಿತಿ ನೀಡಿದ್ದಾರೆ.



**ಸತ್ಯಕ್ಕೆ ಸಾವಿಲ್ಲ, ಶಾಶ್ವತವಾಗಿ ಮುಚ್ಚಿಡೋಕೂ ಸಾಧ್ಯವಿಲ್ಲ. ಹೀಗಾಗಿ ತಡವಾಗಿಯಾದರೂ ಶಾಸ್ತ್ರಿ ಯವರ ಬದುಕಿನ ವಿಸ್ತೃತ ಪರಿಚಯ ಭಾರತದ ಹೊಸ ಪೀಳಿಗೆಗೆ ಆಗಿದೆ. ತಾಷ್ಕೆಂಟ್ ಫೈಲ್‌ಗಳ ಹಿಂದಿನ ಕಥೆ, ಅವರ ಅನುಮಾನಾಸ್ಪದ ಸಾವಿನ ಕುರಿತ ವಿಚಾರಗಳು ಒಂದೊಂದಾಗಿ ಹೊರಬಂದಿವೆ. ದಶಕಗಳ ಕಾಲ ಬದಿಗೊತ್ತಲ್ಪಟ್ಟಿದ್ದ ಅವರ ಜನ್ಮದಿನಕ್ಕೆ ಮಾನ್ಯತೆ ಬಂದಿದೆ. ಅದೇ ದಿನಾಂಕದಂದು ಹುಟ್ಟಿದ ಮಹಾತ್ಮನ ಅಬ್ಬರದ ನಡುವೆಯೂ ಶಾಸ್ತ್ರೀಜಿ ಜನ್ಮದಿನಕ್ಕೆ ಎಂದಿಗಿಂತ ದೊಡ್ಡ ಜನಪ್ರಿಯತೆ ದಕ್ಕಿದೆ.**

# ಭಾರತ ಕಂಡ ಕಡು ಪ್ರಾಮಾಣಿಕ ಪ್ರಧಾನಿ ಶ್ರೀವಾಸ್ತವ್!

ಪದಸಾಗರ

ಪ ಈ ಬಾರಿ ವಿಶ್ವವಾಣಿ ಗ್ಲೋಬಲ್ ಅಚೀವರ್ ಅವಾರ್ಡ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ತಾಷ್ಕೆಂಟ್‌ನಲ್ಲಿ ನಡೆಯಲಿದೆ. ಖುದ್ದು ಲಾಲ್ ಬಹದ್ದೂರ್ ಶಾಸ್ತ್ರಿಯವರ ಪುತ್ರ ಸುನಿಲ್ ಶಾಸ್ತ್ರಿ ಅವರ ಕೈಯಿಂದ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಹಾಗೂ ಶಾಸ್ತ್ರಿಯವರ ಪ್ರತಿಮೆಯ ಎದುರ ಪ್ರಶಸ್ತಿ ನೀಡಲಾಗುತ್ತದೆ ಎಂಬ ವಿಷಯ ಚರ್ಚೆಯಾಗುತ್ತಿದ್ದಾಗ, ವಿಶ್ವೇಶ್ವರ ಭಟ್ಟರು ಸುನಿಲ್ ಶಾಸ್ತ್ರಿಯವರೊಂದಿಗೆ ಫೋನ್‌ನಲ್ಲಿ ಮಾತನಾಡುತ್ತಾ ಇದ್ದಾಗ ಎದುರ ಕೂತಿದ್ದ ನನ್ನೊಳಗೆ ಒಂದು ಥ್ರಿಲ್, ಜತೆಜತೆಗೆ ಸಣ್ಣ ಭಾವೋದ್ವೇಗ.

ಶಾಸ್ತ್ರಿ ಅಂದರೆ ನಮ್ಮ ದೇಶದ ದ್ವಿತೀಯ ಪ್ರಧಾನಿ, ಜೈ ಜವಾನ್ ಜೈ ಕಿಸಾನ್ ಘೋಷದ ಸೃಷ್ಟಿಕರ್ತ, ಭಾರತ ಪಾಕ್ ಯುದ್ಧ ವಿರಾಮದ ಒಪ್ಪಂದಕ್ಕೆ ಸಹಿ ಹಾಕಲು ತಾಷ್ಕೆಂಟ್‌ಗೆ ಹೋಗಿದ್ದರು. ಅಲ್ಲಿಯೇ ನಿದ್ರೆಯಲ್ಲಿ ಕೊನೆಯುಸಿರೆಳೆದರು. ಅಂದಿನ ಪಠ್ಯ ಪುಸ್ತಕಗಳು ಕೊಟ್ಟದ್ದು ಇಷ್ಟೇ. ಇದನ್ನು ಬಿಟ್ಟರೆ ಶಾಸ್ತ್ರಿಯವರ ಬಾಲ್ಯದ ಒಂದು ಕಥೆ. ಅವರು ಶಾಲೆಗೆ ಗಂಗಾನದಿ ದಾಟಿ ಹೋಗಬೇಕಿತ್ತು.

ಪ್ರತಿದಿನ ದೋಣಿಯವನಿಗೆ ಶುಲ್ಕ ಕೊಡಲು ಶಾಸ್ತ್ರಿಯವರ ಬಳಿ ಹಣವಿರಲಿಲ್ಲ. ಹೀಗಾಗಿ ಅವರು ಪುಸ್ತಕವನ್ನು ಬೆನ್ನಿಗೆ ಕಟ್ಟಿಕೊಂಡು ಪ್ರತಿದಿನ ಶಾಲೆಯಿಂದ ಮನೆಗೆ ಮನೆಯಿಂದ ಶಾಲೆಗೆ ನದಿಯಲ್ಲಿ ಈಜಿ ಸಾಗುತ್ತಿದ್ದರು. ಒಬ್ಬ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಮತ್ತು ದೇಶ ಕಂಡ ಮೊದಲ ದಿಟ್ಟ ಪ್ರಧಾನಿಯೊಬ್ಬರ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಯದ ಹಾಗೆ ತಡೆಯುವಂತಿತ್ತು ಅಂದಿನ ನಮ್ಮ ಶಿಕ್ಷಣ ವ್ಯವಸ್ಥೆ ಮತ್ತು ರಾಜಕೀಯ ವ್ಯವಸ್ಥೆ.

ಸತ್ಯಕ್ಕೆ ಸಾವಿಲ್ಲ. ಶಾಶ್ವತವಾಗಿ ಮುಚ್ಚಿಡೋಕೂ ಸಾಧ್ಯವಿಲ್ಲ. ಹೀಗಾಗಿ ತಡವಾಗಿಯಾದರೂ ಶಾಸ್ತ್ರಿಯವರ ಬದುಕಿನ ವಿಸ್ತೃತ ಪರಿಚಯ ಭಾರತದ ಹೊಸ ಪೀಳಿಗೆಗೆ ಆಗಿದೆ. ತಾಷ್ಕೆಂಟ್ ಫೈಲ್‌ಗಳ ಹಿಂದಿನ ಕಥೆ, ಅವರ ಅನುಮಾನಾಸ್ಪದ ಸಾವಿನ ಕುರಿತ ವಿಚಾರಗಳು ಒಂದೊಂದಾಗಿ ಹೊರಬಂದಿವೆ. ದಶಕಗಳ ಕಾಲ ಬದಿಗೊತ್ತಲ್ಪಟ್ಟಿದ್ದ ಅವರ ಜನ್ಮದಿನಕ್ಕೆ ಮಾನ್ಯತೆ ಬಂದಿದೆ. ಅದೇ ದಿನಾಂಕದಂದು ಹುಟ್ಟಿದ ಮಹಾತ್ಮನ ಅಬ್ಬರದ ನಡುವೆಯೂ ಶಾಸ್ತ್ರೀಜಿ ಜನ್ಮದಿನಕ್ಕೆ ಎಂದಿಗಿಂತ ದೊಡ್ಡ ಜನಪ್ರಿಯತೆದಕ್ಕಿದೆ.

ಈಗ ಪ್ರತಿಯೊಬ್ಬ ಭಾರತೀಯನಿಗೂ ಶಾಸ್ತ್ರೀಜಿಯ ಬದುಕು ಗೊತ್ತು. ಶಾಸ್ತ್ರೀಜಿಯವರ ಸಾವಿನ ಹಿಂದೆ ನಡೆದ ಷಡ್ಯಂತ್ರಗಳೂ ಗೊತ್ತು. ಅದೇ ಕಾರಣಕ್ಕೆ ಭಾರತೀಯರು ಶಾಸ್ತ್ರೀಜಿಯವರನ್ನು ರಾಷ್ಟ್ರಪಿತನಿಗಿಂತ ಎತ್ತರದ ಸ್ಥಾನದಲ್ಲಿಟ್ಟು ನೋಡ್ತಿದ್ದಾರೆ. ಶಾಸ್ತ್ರೀಜಿಯ ಪ್ರಾಮಾಣಿಕ ಮತ್ತು ದಿಟ್ಟ ವ್ಯಕ್ತಿತ್ವದ ಬಗ್ಗೆ ಒಂದೊಂದು ಘಟನೆ ಓದ್ತಾ ಇದ್ರೂ ನಮಗೇ ಗೊತ್ತಿಲ್ದೆ ಕಣ್ಣಲ್ಲಿ ನೀರು ಹನಿಗಟ್ಟುತ್ತದೆ. ಬಹಳಷ್ಟು ಜನಕ್ಕೆ ಗೊತ್ತಿಲ್ಲ.. ಈ ಶಾಸ್ತ್ರಿ ಅನ್ನೋದು ಅವರ ಕುಟುಂಬದ ಹೆಸರೂ ಅಲ್ಲ, ಜಾತಿಸೂಚಕ ಸರ್‌ನೇಮೂ ಅಲ್ಲ. ಶಾಸ್ತ್ರೀ ಅನ್ನೋದು ಅವ್ರಿಗೆ ಕಾಶೀ ವಿಶ್ವವಿದ್ಯಾಲಯದಲ್ಲಿ ಶಾಸ್ತ್ರಾಧ್ಯಯನ ಮಾಡಿದ್ದಕ್ಕೆ ಸಿಕ್ಕ ಪದವಿ!

ಹೌದು. ಶಾಸ್ತ್ರಿಯವರ ಅಸಲೀ ಸರ್‌ನೇಮು ಶ್ರೀವಾಸ್ತವ್. ಹೌದು, ಅವರ ತಂದೆಯ ಹೆಸರು ಶಾರದಾ ಪ್ರಸಾದ್ ಶ್ರೀವಾಸ್ತವ್. ಆ ಪ್ರಕಾರವಾಗಿ ಶಾಸ್ತ್ರೀಜಿಯ ಮೂಲನಾಮ ಲಾಲ್ ಬಹದ್ದೂರ್ ಶ್ರೀವಾಸ್ತವ್. ಆದರೆ ತನ್ನ ಆ ಉಪನಾಮದಿಂದ ತನ್ನ ಸಹಪಾಠಿಗಳಿಗೆ ಕೀಳರಿಮೆ ಆಗುತ್ತದೆ ಅಂತ ಅನಿಸಿ, ಬೇರೆ ಮಕ್ಕಳ ಜೊತೆ ಬೆರೆಯೋದಕ್ಕೆ ಕಷ್ಟ ಆಗತ್ತೆ ಎಂದು ಭಾವಿಸಿ, ಶ್ರೀವಾಸ್ತವ್ ಅನ್ನೋ ತಮ್ಮ ಕೊನೆಯ ನಾಮವನ್ನೇ ತೆಗೆಸಿಬಿಡ್ತಾರೆ ಶಾಸ್ತ್ರೀಜಿ.

ಅದೂ ಯಾವ ವಯಸ್ಸಲ್ಲಿ? ಕೇವಲ ಹನ್ನೆರಡನೆಯ ವಯಸ್ಸಲ್ಲಿ! ಅಬ್ಬಾ ಆ ವಯಸ್ಸ ಅಂಥ ಪ್ರಬುದ್ಧತೆ! ಅಲ್ಲಿಂದ ಮುಂದೆ ಅವರು ಶಾಸ್ತ್ರಿ ಎಂಬ ಪದವಿನಾಮ ಸಿಗುವತನಕ ಬರೀ ಲಾಲ್ ಬಹದ್ದೂರ್ ಅಂತಾನೇ ಗುರುತಿಸಿಕೊಳ್ಳುತ್ತಿದ್ದರು. ತಮ್ಮ ಹದಿನಾರನೆಯ ವಯಸ್ಸ, ಅಂದ್ರೆ 1921ರಲ್ಲಿ ಅಸಹಕಾರ ಚಳುವಳಿ ಶುರು ಆದಾಗ ಬೇರೆ ಎಲ್ಲ ಯೋಚನೆ ಸೈಡಿಗಿಟ್ಟು ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿಬಿಟ್ಟಿದ್ದರು ಶಾಸ್ತ್ರಿಗಳು.

ಪ್ರಥಮ ಬಾರಿಗೆ ಅವರು ಬಂಧನಕ್ಕೊಳಗಾಗಿದ್ದು ಕೂಡ ಹದಿನಾರರ ಹರೆಯದಲ್ಲಿಯೇ. ಆದರೆ ಇನ್ನೂ ಹದಿನೇಳು ತುಂಬಿಲ್ಲ ಅನ್ನೋ ಕಾರಣಕ್ಕೆ ಜೈಲಲ್ಲಿ ಇಟ್ಟುಕೊಳ್ಳಲು ಆಗದೇ ಬಿಡುಗಡೆ ಮಾಡಲಾಗಿತ್ತು. ಆದರೆ ಶಾಸ್ತ್ರಿ ಅದರಿಂದ ಕೊಂಚವೂ ಎದೆಗುಂದದೇ, ಇನ್ನಷ್ಟು ಅಗ್ರೆಸಿವ್ ಆಗಿ ಚಳವಳಿಗೆ ನುಗ್ಗಿದರು.

ಬರೋಬ್ಬರಿ ಒಂಬತ್ತು ವರ್ಷ ಜೈಲುವಾಸ ಕೂಡ ಅನುಭವಿಸಿದರು. ಶಾಸ್ತ್ರಿಯವರ ಪ್ರಾಮಾಣಿಕತೆ ಯಾವ ಮಟ್ಟದಲ್ಲಿತ್ತು ನೋಡಿ. ಸ್ವಾತಂತ್ರ್ಯಕ್ಕಾಗಿ ಜೈಲುವಾಸ ಅನುಭವಿಸಿದ ಕುಟುಂಬಗಳಿಗೆ ಆಗ ಪೆನ್ಷನ್ ಅಂತ ಕೊಡ್ತಾ ಇತ್ತು ಬ್ರಿಟಿಷ್ ಸರಕಾರ. ಶಾಸ್ತ್ರಿಗಳ ಪತ್ನಿ ಲಲಿತಾ ಅವರಿಗೂ ತಿಂಗಳಿಗೆ ಐವತ್ತು ರುಪಾಯಿ ತಲುಪುತ್ತಿತ್ತು. ಶಾಸ್ತ್ರಿಯವರ ಪತ್ನಿ ಕೂಡ ಅಷ್ಟೇ ಸರಳ ಮತ್ತು ಪ್ರಾಮಾಣಿಕ ವ್ಯಕ್ತಿತ್ವದ ಹೆಣ್ಮಗಳು. ಗಂಡನಿಗೆ ಬರ್ತಾ ಇದ್ದ ಆ ಪೆನ್ಷನ್ ಹಣದಲ್ಲಿ ತೀರಾ ಕಷ್ಟಪಟ್ಟು ಪ್ರತಿ ತಿಂಗಳು ಹತ್ತು ರುಪಾಯಿ ಉಳಿಸಿ ಇಡುತ್ತಿದ್ದರು.

ಹೀಗೇ ಒಮ್ಮೆ ಪತ್ರ ಬರೆದಾಗ, ಈ ವಿಚಾರವನ್ನು ಗಂಡನ ಜೊತೆ ಪತ್ನಿ ಲಲಿತಾ ಹಂಚಿಕೊಳ್ಳುತ್ತಾರೆ. ರೀ.. ನಿಮಗೆ ಬರ್ತಾ ಇರೋ ಪೆನ್ಶನ್ ಹಣದಲ್ಲಿ ನಾನು ಪ್ರತಿ ತಿಂಗಳು ಹತ್ತತ್ತು ರುಪಾಯಿ ಉಳಿಸ್ತಾ ಇದೀನಿ ಅಂತ. ಗಂಡನಿಗೆ ಈ ವಿಚಾರ ಕೇಳಿ ಖುಷಿ ಆಗಬಹುದು ಅನ್ನೋದು ಅವರ ಎಣಿಕೆ ಆಗಿತ್ತು. ಆದರೆ ಶಾಸ್ತ್ರಿಯವರ ಪ್ರತಿಕ್ರಿಯೆ ಹೇಗಿತ್ತು ನೋಡಿ. ಅವರು ಈ ವಿಚಾರ ಗೊತ್ತಾದ ತಕ್ಷಣ, ಲೋಕಸೇವಾ ಸಮಿತಿಗೆ ಪತ್ರ ಬರೀತಾರೆ.

ನೀವು ಕೊಡ್ತಾ ಇರೋ ಪೆನ್ಶನ್ ನಮ್ಮ ಕುಟುಂಬಕ್ಕೆ ಜಾಸ್ತಿ ಆಗ್ತಾ ಇದೆ. ಇನ್ನು ಮುಂದೆ ನಲವತ್ತು ರುಪಾಯಿ ಕೊಡಿ ಸಾಕು. ಮಿಕ್ಕಿರುವ ಹತ್ತು ರುಪಾಯಿ ಬೇರೆ ಯಾರಿಗಾದ್ರೂ ಅಗತ್ಯ ಇದ್ರೆ, ಅವರಿಗೆ ಕೊಡಿ ಅಂತ! ಬ್ರೂಟಲಿ ಹಾನೆಸ್ಟ್ ಅಂತಾರಲ್ಲ ಆ ಮಾತಿಗೆ ಶಾಸ್ತ್ರೀಜಿಗಿಂತ ಪರ್ಫೆಕ್ಟ್ ಉದಾಹರಣೆ ಇನ್ನೊಂದು ಸಿಗಲು ಸಾಧ್ಯವೇ ಇಲ್ಲ.

ಶಾಸ್ತ್ರೀಜಿ ಎಷ್ಟು ಪ್ರಿನ್ಸಿಪಲ್ಡ್ ಮನುಷ್ಯ ಎಂಬುದಕ್ಕೆ ಒಂದು ಘಟನೆ ಸಾಕ್ಷಿ. ವರದಕ್ಷಿಣೆ ಪದ್ಧತಿಯನ್ನು ಕಟುವಾಗಿ ವಿರೋಧಿಸಿಕೊಂಡು ಬಂದಿದ್ದವರು ಅವರು. ಆದರೆ ಅವರ ಮದುವೆ ಒಂದು ಸಂಪ್ರದಾಯವಾದಿ ಕುಟುಂಬದ ಹೆಣ್ಣುಮಗಳ ಜೊತೆ ಫಿಕ್ಸ್ ಆಗಿ ಬಿಡುತ್ತದೆ. ಆ ಫ್ಯಾಮಿಲಿಯವರು ವರದಕ್ಷಿಣೆ ನೀಡದೇ ಕನ್ಯಾದಾನ ಮಾಡಬಾರದು ಅಂತ ನಂಬಿರುವವರು. ಶಾಸ್ತ್ರಿ ಮನಸಿನಲ್ಲಿ ತಾಕಲಾಟ. ವರದಕ್ಷಿಣೆ ಪಡೆಯದೇ ಇರುವ ಹಾಗೂ ಇಲ್ಲ ತಮ್ಮ ಸಿದ್ಧಾಂತ ಮುರಿಯುವಂತೆಯೂ ಇಲ್ಲ. ಆಗ ಅವರು ವರದಕ್ಷಿಣೆ ರೂಪದಲ್ಲಿ ಕೇಳಿ ಪಡೆದದ್ದು ಖಾದಿ ಬಟ್ಟೆ ಹಾಗೂ ಚರಕ. ಸ್ವಾತಂತ್ರ್ಯ ಬಂದ ನಂತರ ಉತ್ತರಪ್ರದೇಶಕ್ಕೆ ಗೋವಿಂದ್ ವಲ್ಲಭ್ ಪಂತ್ ಮುಖ್ಯಮಂತ್ರಿ ಆಗುತ್ತಾರೆ.

ಶಾಸ್ತ್ರಿಯವರಿಗೆ ಪೊಲೀಸ್ ಇಲಾಖೆಯ ಮಂತ್ರಿ ಹುದ್ದೆ ಸಿಗುತ್ತದೆ. ಶಾಸ್ತ್ರೀಜಿ ಮಂತ್ರಿ ಆದ ತಕ್ಷಣ ನೀಡಿದ ಇನ್ಮುಂದೆ ಯಾವ ಪೊಲೀಸರೂ ಪ್ರತಿಭಟನಾಕಾರರ ಮೇಲೆ ಲಾಠಿ ಚಾರ್ಜ್ ಮಾಡೋ ಹಾಗಿಲ್ಲ. ಅವರು ಮನುಷ್ಯರು.. ಕಾಡು ಪ್ರಾಣಿಗಳಲ್ಲ. ಹಾಗೊಂದು ವೇಳೆ ಗುಂಪು ಚದುರಿಸಬೇಕಾದ ಪರಿಸ್ಥಿತಿ ಬಂದಾಗ ವಾಟರ್ ಜೆಟ್ ಸ್ಪ್ರೇ ಮಾಡಿ ಅಂತ ಆದೇಶ ಹೊರಡಿಸುತ್ತಾರೆ. ಸ್ವತಂತ್ರ ಭಾರತದಲ್ಲಿ ಅದೇ ಮೊತ್ತ ಮೊದಲ ಬಾರಿಗೆ ಈ ರೀತಿಯ ಆದೇಶ ಹೊರಬಿದ್ದದ್ದು. ಮುಂದೆ ಸಾರಿಗೆ ಮಂತ್ರಿ ಆದ ಸಮಯದಲ್ಲಿ, ಮಹಿಳೆಯರಿಗೂ ಸಮಾನತೆ ಬೇಕು ಎಂದು ಬಸ್‌ಗಳಲ್ಲಿ ಲೇಡಿ ಕಂಡಕ್ಟರ್ ಹುದ್ದೆಗಳನ್ನು ಸೃಷ್ಟಿ ಮಾಡಿದ್ದರು ಶಾಸ್ತ್ರೀಜಿ.

ಮಹಿಳಾ ಸಮಾನತೆಗೆ ಮುನ್ನುಡಿ ಇಟ್ಟದ್ದೇ ಶಾಸ್ತ್ರಿಗಳು. ನೆನಪಿಡಿ. ದೇಶದಲ್ಲಿ ಭ್ರಷ್ಟಾಚಾರ ನಿಗ್ರಹ ದಳವನ್ನು ಮೊದಲ ಬಾರಿಗೆ ರಚನೆ ಮಾಡಿದ್ದು ಲಾಲ್ ಬಹದ್ದೂರ್ ಶಾಸ್ತ್ರಿಗಳು. ದೇಶದ ಅತ್ಯುನ್ನತ ತನಿಖಾ ಸಂಸ್ಥೆ ಸಿಬಿಐ ಕೂಡಾ ಲಾಲ್ ಬಹದ್ದೂರ್ ಶಾಸ್ತ್ರಿಯವರ ಕನಸಿನ ಕೂಸು. ಇನ್ನು ಸೋಮವಾರದ ಉಪವಾಸ ಎಂಬ ಪದ್ಧತಿ ಶುರು ಆಗಿದ್ದರ ಬಗ್ಗೆ ಹೇಳುವ ಅಗತ್ಯವೇ ಇಲ್ಲ . ದೇಶಕ್ಕೆ ಭೀಕರವಾದ ಬರಗಾಲ ಬಂದಿರುತ್ತದೆ. ಕುತಂತ್ರಿಗಳ ನೀತಿಯಿಂದಾಗಿ ವಿದೇಶದಿಂದ ಬರಬೇಕಾಗಿರುವ ಗೋಧಿ ಸರಬರಾಜು ನಿಂತು ಹೋಗಿರುತ್ತದೆ.

ಕೆಲವರ್ಷಗಳ ಹಿಂದೆ ಪ್ರಧಾನಿ ಮೋದಿ ಗಿವ್ ಅಪ್ ಸಬ್ಸಿಡಿ ಅಂತ ಸಿಲಿಂಡರ್ ಸಬ್ಸಿಡಿ ಬಿಡಲು ಮನವಿ ಮಾಡಿದ ಹಾಗೆ, ಆಗ ಶಾಸ್ತ್ರೀಜಿ.. ದೇಶದ ಪ್ರತಿಯೊಬ್ಬರೂ ವಾರದಂದು ದಿನ ಊಟ ಬಿಟ್ಟರೆ ದೇಶ ಆಪತ್ತಿನಿಂದ ಹೊರಗೆ ಬರಬಹುದಾ ಎಂದು ಯೋಚಿಸುತ್ತಾರೆ. ಹಾಗಂತ ದೇಶದ ಜನತೆಗೆ ಏಕಾಏಕಿ ವಾರಕ್ಕೊಂದು ದಿನ ಊಟ ಬಿಡಿ ಎಂಬ ಆದೇಶ ಹೊರಡಿಸುವುದಿಲ್ಲ. ಅದರ ಬದಲಿಗೆ ತಾವು ಇಂದಿನಿಂದ ಪ್ರತಿ ಸೋಮವಾರ ಉಪವಾಸ ಕೈಗೊಳ್ಳುತ್ತೇನೆ ಎಂದು ಘೋಷಣೆ ಮಾಡಿ ವಾರಕ್ಕೆ ಒಂದು ಉಪವಾಸ ಶುರು ಮಾಡುತ್ತಾರೆ.

ಇಡೀ ದೇಶವೇ ಶಾಸ್ತ್ರೀಜಿಯ ಈ ನಿರ್ಧಾರದಿಂದ ಪ್ರಭಾವಿತಗೊಳ್ಳುತ್ತದೆ. ದೇಶಾದ್ಯಂತ ಅತಿ ದೊಡ್ಡ ಸಂಖ್ಯೆಯಲ್ಲಿ ವಾರದ ಉಪವಾಸ ಕೈಗೊಳ್ಳುತ್ತಾರೆ. ಅದು ಮುಂದೆ ಶಾಸ್ತ್ರಿ ಸೋಮವಾರ ಅಂತಲೇ ಪ್ರಖ್ಯಾತವಾಗುತ್ತದೆ. ಇವತ್ತಿಗೂ ಈ ಸೋಮವಾರದ ಉಪವಾಸ ಪಾಲನೆ ಮಾಡುತ್ತಿರುವ ಲಕ್ಷಾಂತರ ಕುಟುಂಬಗಳಿವೆ. 1962ರಲ್ಲಿ ನೆಹರೂ ಪ್ರಧಾನಿ ಆಗಿದ್ದ ಅವಧಿಯಲ್ಲಿ, ದೇಶ ಚೀನಾ ವಿರುದ್ಧದ ಯುದ್ಧದಲ್ಲಿ ಹೀನಾಯವಾಗಿ ಸೋತಿತ್ತು. ನಮ್ಮ ಸೈನಿಕರ ಮನೋಬಲವೇ ಉಡುಗಿ ಹೋಗಿತ್ತು. ಎರಡು ಮೂರು ವರ್ಷದ ನಂತರವೂ ಭಾರತೀಯ ಸೇನೆ ಈ ಸೋಲಿನಿಂದ ಚೇತರಿಸಿಕೊಂಡಿರಲಿಲ್ಲ. ಇಂಥ ಸಮಯದಲ್ಲಿ ನೆಹರೂ ನಿಧನರಾಗಿರುತ್ತಾರೆ. ಶಾಸ್ತ್ರೀಜಿ ಪ್ರಧಾನಿಗಳಾಗುತ್ತಾರೆ. ಅದೇ ಸಮಯ ನೋಡಿ ಪಾಪಿ ಪಾಕಿಸ್ತಾನ ಭಾರತದ ಮೇಲೆ ದಾಳಿ ಮಾಡುತ್ತದೆ.

ಶಾಸ್ತ್ರೀಜಿಯವರನ್ನು ಬಹಳ ಹಗುರವಾಗಿ ಪರಿಗಣಿಸಿರುತ್ತದೆ ಪಾಕಿಸ್ತಾನ. ಈ ದುರಹಂಕಾರದಿಂದ ಗಡಿ ಒಳಗೆ ನುಗ್ಗಿದ್ದ ಪಾಕಿಸ್ತಾನೀ ಸೇನೆಯನ್ನು ಹುಚ್ಚು ನಾಯಿಯನ್ನು ಓಡಿಸೋ ಹಾಗೆ ಲಾಹೋರ್ ತನಕ ಅಟ್ಟಾಡಿಸಿ ಬಡಿದಿತ್ತು ಶಾಸ್ತ್ರೀಜಿ ನೇತೃತ್ವದ ಇಂಡಿಯನ್ ಆರ್ಮಿ. ನಂಗೆ ಈ ಒಂದು ಘಟನೆ ಶಾಸ್ತ್ರೀಜಿ ಅಮ್ರು ಶಿವಾಜಿ ಮಹಾರಾಜರ ಅವತಾರವಾ ಎಂಬ ಅನುಮಾನ ಹುಟ್ಟಲು ಕಾರಣ.

ಪಾಕಿಸ್ತಾನದ ಪ್ರಧಾನಿ ಅಯೂಬ್ ಖಾನ್ ಆರೂಕಾಲು ಅಡಿ. ಶಾಸ್ತ್ರಿ ಮೂರೂಕಾಲು ಅಡಿ. ಇವನೇನು ಮಾಡೋಕೆ ಸಾಧ್ಯ ಎಂದು ಗೇಲಿ ಮಾಡಿದ್ದ ಪಾಕಿಸ್ತಾನಕ್ಕೆ ಆಗ ಶಾಸ್ತ್ರಿ ಹೇಳಿದ ಒಂದು ಮಾತು ಮೂರೂಕಾಲು ಅಡಿಯ ನಾನು ಅಯೂಬ್ ಖಾನ್ ಎದ್ರು ತಲೆ ಎತ್ತಿಕೊಂಡು ಮಾತನಾಡ್ತೇನೆ. ಆದರೆ ಅಯೂಬ್ ಖಾನ್ ನನ್ನ ಮುಂದೆ ತಲೆ ತಗ್ಗಿಸಿಯೇ ಮಾತನಾಡಬೇಕಾಗು ತ್ತದೆ! ಶಿವಾಜಿ ಕೂಡ ಹೀಗೇ ಅಲ್ಲವೇ.. ಏಳೂವರೆ ಅಡಿಯ ಅಫ್ಜಲ್ ಖಾನ್‌ನನ್ನು ವ್ಯಾಘ್ರನಖದಿಂದ ಸೀಳಿ ಹಾಕಿದ್ದು! ಮಾಜಿ ಮಂತ್ರಿ ನಾಗೇಂದ್ರ, ಕೇಂದ್ರದ ಮಾಜಿ ಸಚಿವ ಧರ್ಮೇಂದ್ರ ಪ್ರಧಾನ್ ಥರದ ಘಟನೆಗಳನ್ನು ನೋಡಿದಾಗೆಲ್ಲ ನನಗೆ ನೆನಪಾಗುವುದು ಶಾಸ್ತ್ರೀಜಿ ಒಬ್ಬರೇ.

1956ರಲ್ಲಿ ರೈಲ್ವೇ ಮಂತ್ರಿಯಾಗಿದ್ದ ಸಂದರ್ಭದಲ್ಲಿ ತಮಿಳ್ನಾಡಿನಲ್ಲಿ ಭೀಕರವಾದ ರೈಲ್ವೇ ಅಪಘಾತ ಆಗಿತ್ತು. ನೂರೈವತ್ತು ಜನ ಪ್ರಾಣ ಕಳೆದುಕೊಂಡರು. ಈ ಸುದ್ದಿ ಬರುತ್ತಿದ್ದ ಹಾಗೇ ಶಾಸ್ತ್ರೀಜಿ ನೈತಿಕ ಜವಾಬ್ದಾರಿ ಹೊತ್ತು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿಯೇಬಿಟ್ಟರು. ಕುಟುಂಬ ರಾಜಕಾರಣ ಎಂಬುದು ನಾರ್ಮ್ ಎಂಬಂತಾಗಿರುವ ಈ ಸಂದರ್ಭದಲ್ಲಿ ಶಾಸ್ತ್ರಿ ಮತ್ತೊಮ್ಮೆ ಭಿನ್ನರಾಗಿ ನೆನಪಾಗುತ್ತಾರೆ. ಶಾಸ್ತ್ರೀಜಿ ತಮ್ಮ ಮಕ್ಕಳಿಗೆ ತುಂಬ ಸ್ಟ್ರಿಕ್ಟ್ ಆಗಿ ಹೇಳಿದ್ದರು; ಯಾವುದೇ ಕಾರಣಕ್ಕೂ ಎಲ್ಲಿಯೂ ತಮ್ಮ ಹೆಸರನ್ನು ಬಳಸಿಕೊಳ್ಳಬಾರದೆಂದು. ಅಪ್ಪನ ಮಾತಿನಂತೆ ಶಾಸ್ತ್ರೀಜಿ ಮಕ್ಕಳು ಕೆಲಸಕ್ಕೆ ಅರ್ಜಿ ಹಾಕುವಾಗ ತಂದೆಯ ಹೆಸರು ಮತ್ತು ಉದ್ಯೋಗ ಕಾಲಂಗಳನ್ನು ಖಾಲಿ ಬಿಡುತ್ತಿದ್ದರು. ಹಾಗೂ ಒಮ್ಮೆ ಪ್ರಧಾನಿಯ ಮಗ ಎಂದು ಅವರ ಮಗನಿಗೆ ಉದ್ಯೋಗದಲ್ಲಿ ಪ್ರಮೋಷನ್ ಕೊಟ್ಟಿದ್ದಕ್ಕೆ ಆ ಪ್ರಮೋಷನ್ ಆರ್ಡರನ್ನೇ ರದ್ದು ಮಾಡಿದ್ದರು ಶಾಸ್ತ್ರೀಜಿ. ಇದಕ್ಕಿಂತ ಪ್ರಾಮಾಣಿಕ ವ್ಯಕ್ತಿತ್ವ ನೋಡಲು ಸಾಧ್ಯವೇ ಆಗಲಿಕ್ಕಿಲ್ಲ. ಎರಡೇ ಎರಡು ವರ್ಷ ಅವರು ಪ್ರಧಾನಿ ಪಟ್ಟದಲ್ಲಿ ಕೂತಿದ್ದು. ಆದರೆ ಶತಮಾನಕ್ಕಾಗುವಷ್ಟು ಯೋಜನೆಗಳನ್ನು ತಲೆಯಲ್ಲಿಟ್ಕೊಂಡಿದ್ದರು.

ಬರೀ ಎರಡು ವರ್ಷಗಳಲ್ಲಿ ಚೀನಾ, ಪಾಕಿಸ್ತಾನ, ಅಮೆರಿಕ ಎಲ್ಲ ದೇಶಗಳಿಗೂ ಭಾರತದ ಬಗ್ಗೆ ನಡುಕ ಹುಟ್ಟಿಸಿದ್ದರು. ಅಣುಬಾಂಬ್ ಪರೀಕ್ಷೆಗೂ ಯೋಜನೆ ಸಿದ್ಧಪಡಿಸಿದ್ದರು. ಪೂರ್ತಿ ಐದು ವರ್ಷ ಇದ್ದಿದ್ದಲ್ಲಿ ಅಥವಾ ಇನ್ನೊಂದೆರಡು ಟರ್ಮ್ ಪ್ರಧಾನಿ ಆಗಿ ಮುಂದುವರಿದಿದ್ದಲ್ಲಿ ಈ ದೇಶದ ಭವಿಷ್ಯವೇ ಬೇರೆ ಥರ ಇರ್ತಿತ್ತು. ಇದರಲ್ಲಿ ಅನುಮಾನವೇ ಇಲ್ಲ. ಆದರೆ ತಾಷ್ಕೆಂಟ್‌ನಲ್ಲಿ ಅದೇನು ನಡೆಯಿತು ಎಂಬುದು ಇಂದಿಗೂ ರಹಸ್ಯ. ಸಹಜ ಅಲ್ಲದಿರುವ ಸಾವನ್ನು, ಪೋಸ್ಟ್ ಮಾರ್ಟಮ್ ಕೂಡ ಇಲ್ಲದೇ ಮುಗಿಸಿಬಿಡುವ ಭಾರತ ಸರಕಾರ.

ಶಾಸ್ತ್ರೀಜಿಯವರ ಸಾವು ನಿಗೂಢವಾಗಿಯೇ ಉಳಿಸಿಬಿಟ್ಟಿತು. ಇಷ್ಟು ಪ್ರಾಮಾಣಿಕವಾಗಿ, ದೇಶ ದೇಶ ಎಂದು ಬಡಿದಾಡಿದ ಶಾಸ್ತ್ರೀಜಿಗೆ ಸಿಕ್ಕಿದ್ದಾದರೂ ಏನು? ನಿಧನಾನಂತರವೂ ಅವರಿಗೆ ಸಿಕ್ಕಿದ್ದು ನೋವೇ. 1965ರಲ್ಲಿ ಶಾಸ್ತ್ರೀಜಿ ಕೇವಲ ಐದುಸಾವಿರ ರುಪಾಯಿ ಸಾಲ ಮಾಡಿರುತ್ತಾರೆ. ಹೌದು. ಅವರು ಐದು ಸಾವಿರ ರುಪಾಯಿ ಸಾಲ ಮಾಡಿದ್ದು ಪ್ರಧಾನಿ ಆಗಿದ್ದ ಸಮಯದಲ್ಲಿ. ಅದು ಒಂದು ಫಿಯಟ್ ಕಾರ್ ಖರೀದಿ ಮಾಡುವ ಸಲುವಾಗಿ.

ದುರದೃಷ್ಟವಶಾತ್ ಅವರು ಆ ಸಾಲ ತೀರುವ ಮುನ್ನವೇ ಪ್ರಾಣತ್ಯಾಗ ಮಾಡಿಬಿಡುತ್ತಾರೆ. ಬ್ಯಾಂಕಿನಿಂದ ಅವರ ಪತ್ನಿಗೆ ಸಾಲ ತೀರಿಸಿ ಅಂತ ವಿಪರೀತ ಒತ್ತಡ ಶುರುವಾಗುತ್ತದೆ. ಲಲಿತಾ ಶಾಸ್ತ್ರಿ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಬ್ಯಾಂಕಿನವರ ಬಳಿ ಹೇಳಿಕೊಂಡರೂ ಬ್ಯಾಂಕ್ ಒಪ್ಪುವುದಿಲ್ಲ. ಆಗ ಲಲಿತಾ ಶಾಸ್ತ್ರಿ ಸರಕಾರಕ್ಕೆ ಪತ್ರ ಬರೆಯುತ್ತಾರೆ. ಸಹಾಯಕ್ಕಾಗಿ ಮನವಿ ಸಲ್ಲಿಸಿದರೂ ಸರಕಾರ ಒಂದು ಚೂರೂ ಸ್ಪಂದಿಸುವುದಿಲ್ಲ.

ಇಂದಿರಾ ಗಾಂಧಿ ಸರಕಾರ ಶಾಸ್ತ್ರೀಜಿಯನ್ನು ಯಾವತ್ತೋ ಮರೆತುಬಿಟ್ಟಿತ್ತು. ಕೊನೆಗೆ ತಮಗೆ ಬರುತ್ತಿದ್ದ ಪೆನ್ಶನ್ ಹಣದಲ್ಲಿ ಕಂತುಗಳ ಮೂಲಕ ಸಾಲ ತೀರಿಸಿ ಮುಗಿಸುತ್ತಾರೆ ಶಾಸ್ತ್ರೀಜಿ ಪತ್ನಿ. ಶಾಸ್ತ್ರೀಜಿ ಕೊನೆಯುಸಿರೆಳೆದ ನಾಡಿನಲ್ಲಿ, ಅವರ ಪ್ರತಿಮೆಯೆದುರು ಪ್ರಶಸ್ತಿ ಸ್ವೀಕರಿಸುವ ಅವರೆಲ್ಲರ ಭಾಗ್ಯಕ್ಕೆ ಎಣೆ ಇಲ್ಲ. ಈ ಪ್ರಶಸ್ತಿ ನೆಪದಲ್ಲಿ ಶಾಸ್ತ್ರಿಯವರ ಜೀವನದ ಕೆಲವು ಅಂಶಗಳು ಮತ್ತೆ ನೆನಪಾದವು. ಶಾಸ್ತ್ರಿಯವರ ಪ್ರಾಮಾಣಿಕತೆ ಮತ್ತು ದೇಶಪ್ರೇಮದ ಒಂದಂಶ ನಮ್ಮೊಳಗೆ ಜಾಗೃತಗೊಂಡರೂ ಅದು ದೇಶಕ್ಕೆ ಮತ್ತು ನಮ್ಮ ವ್ಯಕ್ತಿತ್ವಕ್ಕೆ ದೊಡ್ಡ ಘನತೆ ತಂದುಕೊಡಬಲ್ಲದು.

- **ನವೀನ್** ಸಾಗರ್



# ಕಾವೇರಿ: ಕರ್ನಾಟಕದ ಹಕ್ಕು ಏನು? ಕೇಳಿದ್ದೇನು? ಪಡೆದಿದ್ದೇನು?

**■ ಕರ್ನಾಟಕದ ಕೆಲವು ಪ್ರಮುಖ ಬೇಡಿಕೆಗಳನ್ನು ನ್ಯಾಯಮಂಡಳಿ ತಿರಸ್ಕರಿಸಿತು ಅಥವಾ ಕಡಿತಗೊಳಿಸಿತು. ಕೆಲವನ್ನು ತಾತ್ವಿಕವಾಗಿ ಅಂಗೀಕರಿಸಲಾಯಿತು. ಇತರ ಕೆಲವು ವಾದಗಳಿಗೆ ಸುಪ್ರೀಂ ಕೋರ್ಟ್ ಭಾಗಶಃ ಮಾನ್ಯತೆ ನೀಡಿತು. ಮಹತ್ವದ ಸಂಗತಿಯೆಂದರೆ, ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಕರ್ನಾಟಕದ ಮೇಲ್ಮನವಿ ಭಾಗಶಃ ಅಂಗೀಕರಿಸಲಾಗಿದೆ ಎಂದು ದಾಖಲಿಸಿತು ಮತ್ತು ಅದರ ಒಟ್ಟಾರೆ ಹಂಚಿಕೆಯನ್ನು 14.75 ಟಿಎಂಸಿ ಹೆಚ್ಚಿಸಿತು.**





ಜಲಜಾಗೃತಿ

ಜ ಕಾವೇರಿ ವಿವಾದದ ಇತಿಹಾಸವನ್ನು ಸಾಮಾನ್ಯವಾಗಿ ಒಂದು ಸರಳ ಪ್ರತಿಪಾದನೆಗೆ ಸೀಮಿತಗೊಳಿಸಲಾಗುತ್ತದೆ: ಕರ್ನಾಟಕವು ಹೆಚ್ಚಿನ ನೀರನ್ನು ಬೇಡಿತು, ಕಾವೇರಿ ಜಲ ವಿವಾದಗಳ ನ್ಯಾಯಮಂಡಳಿ (ಸಿಡಬ್ಲ್ಯುಡಿಟಿ) ಅದಕ್ಕೆ 270 ಟಿಎಂಸಿ ಹಂಚಿಕೆ ಮಾಡಿತು ಮತ್ತು ಸುಪ್ರೀಂ ಕೋರ್ಟ್ 2018ರಲ್ಲಿ ಅದನ್ನು 284.75 ಟಿಎಂಸಿಗೆ ಹೆಚ್ಚಿಸಿತು. ವಿಶಾಲ ಮಟ್ಟದಲ್ಲಿ ಈ ವಿವರಣೆ ವಾಸ್ತವಿಕವಾಗಿದ್ದರೂ, ಕರ್ನಾಟಕವು ಪ್ರಾಧಿಕಾರಗಳ ಮುಂದೆ ಮಂಡಿಸಿದ ಕಾನೂನು ಮತ್ತು ಜಲವೈಜ್ಞಾನಿಕ ವಿಚಾರಗಳನ್ನು ಇದು ಸಮರ್ಪಕವಾಗಿ ವಿವರಿಸುವುದಿಲ್ಲ.

ಕರ್ನಾಟಕದ ಪ್ರಕರಣ ಹಲವಾರು ಬೇಡಿಕೆಗಳು ಮತ್ತು ಕಾನೂನು ಪ್ರತಿಪಾದನೆಗಳನ್ನು ಒಳಗೊಂಡಿತ್ತು. ರಾಜ್ಯಗಳು ನದಿಗೆ ನೀಡುವ ನೀರಿನ ಪ್ರಮಾಣ; ಒಟ್ಟು ಜಲಲಭ್ಯತೆ; 1892 ಮತ್ತು 1924ರ ಒಪ್ಪಂದಗಳ ಪರಿಣಾಮ; ತಮಿಳುನಾಡಿನ ನೀರಿನ ಬಳಕೆ; ಕರ್ನಾಟಕದ ನೀರಾವರಿ ಅಗತ್ಯ; ಬೆಂಗಳೂರಿನ ಕುಡಿಯುವ ನೀರಿನ ಅಗತ್ಯ; ಗೃಹಬಳಕೆ, ಗ್ರಾಮೀಣ ಮತ್ತು ಕೈಗಾರಿಕಾ ಅಗತ್ಯ; ವಿದ್ಯುತ್ ಬಳಕೆ; ಕರ್ನಾಟಕವು ಬಿಳಿಗುಂಡ್ಲು ಬಳಿ ಲಭ್ಯವಾಗುವಂತೆ ಮಾಡಬೇಕಾದ ನೀರಿನ ಪ್ರಮಾಣ. ಆದ್ದರಿಂದ ಕರ್ನಾಟಕದ ಕಾನೂನು ಪ್ರತಿನಿಧಿತ್ವದ ಕಾರ್ಯಕ್ಷಮತೆಯನ್ನು ನಿರ್ಣಯಿಸುವ ಸರಿಯಾದ ವಿಧಾನವೆಂದರೆ ವಿಚಾರವಾರು ಪರಿಶೀಲನೆ.

ಕರ್ನಾಟಕದ ಕೆಲವು ಪ್ರಮುಖ ಬೇಡಿಕೆಗಳನ್ನು ನ್ಯಾಯಮಂಡಳಿ ತಿರಸ್ಕರಿಸಿತು ಅಥವಾ ಕಡಿತಗೊಳಿಸಿತು. ಕೆಲವನ್ನು ತಾತ್ವಿಕವಾಗಿ ಅಂಗೀಕರಿಸಲಾಯಿತು. ಇತರ ಕೆಲವು ವಾದಗಳಿಗೆ ಸುಪ್ರೀಂ ಕೋರ್ಟ್ ಭಾಗಶಃ ಮಾನ್ಯತೆ ನೀಡಿತು. ಮಹತ್ವದ ಸಂಗತಿಯೆಂದರೆ, ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಕರ್ನಾಟಕದ ಮೇಲ್ಮನವಿ ಭಾಗಶಃ ಅಂಗೀಕರಿಸಲಾಗಿದೆ ಎಂದು ದಾಖಲಿಸಿತು ಮತ್ತು ಅದರ ಒಟ್ಟಾರೆ ಹಂಚಿಕೆಯನ್ನು 14.75 ಟಿಎಂಸಿ ಹೆಚ್ಚಿಸಿತು.

ಜೊತೆಗೆ ಸಾಮಾನ್ಯ ವರ್ಷದಲ್ಲಿ ಬಿಳಿಗುಂಡ್ಲುವಿನಲ್ಲಿ ಕರ್ನಾಟಕದ ಬಾಧ್ಯತೆಯನ್ನು 192 ಟಿಎಂಸಿಯಿಂದ 177.25 ಟಿಎಂಸಿಗೆ ಕಡಿತಗೊಳಿಸಿತು. ಕರ್ನಾಟಕ ಏನು ಕೋರಿತು? ಸಿಡಬ್ಲ್ಯೂಡಿಟಿ ಏನು ತೀರ್ಮಾನಿಸಿತು? ಸುಪ್ರೀಂ ಕೋರ್ಟ್ ಅದನ್ನು ಹೇಗೆ ಪರಿಗಣಿಸಿತು? ಕರ್ನಾಟಕದ ವಕೀಲರು ಏನು ಸಾಧಿಸಿದರು?

ಕರ್ನಾಟಕದ ಮೂಲ ಬೇಡಿಕೆ 465 ಟಿಎಂಸಿ ಸುಪ್ರೀಂ ಕೋರ್ಟ್ ತನ್ನ ತೀರ್ಪಿನ ಪ್ಯಾರಾ 389ರಲ್ಲಿ ಕರ್ನಾಟಕದ ಹೇಳಿಕೆ ಕೆಳಗಿನ ಬೇಡಿಕೆಗಳನ್ನು ಒಳಗೊಂಡಿತ್ತು ಎಂದು ದಾಖಲಿಸಿದೆ: ನೀರಾವರಿ- 408 ಟಿಎಂಸಿ. ಬೆಂಗಳೂರು ನೀರು ಪೂರೈಕೆ- 30 ಟಿಎಂಸಿ. ಬೆಂಗಳೂರು ಹೊರತು ಪಡಿಸಿದ ನಗರ ನೀರು ಪೂರೈಕೆ- 10 ಟಿಎಂಸಿ. ಗ್ರಾಮೀಣ ನೀರು ಪೂರೈಕೆ- 6 ಟಿಎಂಸಿ. ಕೈಗಾರಿಕಾ ಬಳಕೆ- 4 ಟಿಎಂಸಿ. ವಿದ್ಯುತ್ ಯೋಜನೆಗಳು- ಜಲಾಶಯ ನಷ್ಟ- 6 ಟಿಎಂಸಿ.

ಉಷ್ಣ ವಿದ್ಯುತ್ ಯೋಜನೆ- 1. ಒಟ್ಟು 465 ಟಿಎಂಸಿ. ಈ ಅಂಕಿಯನ್ನು ನಂತರದ ಮೇಲ್ಮನವಿ ವಿಚಾರಣೆಯಲ್ಲಿ ಉಲ್ಲೇಖಿಸಲಾದ 312 ಟಿಎಂಸಿಯಿಂದ ಪ್ರತ್ಯೇಕವಾಗಿ ನೋಡಬೇಕು. ಸಮಕಾಲೀನ ದಾಖಲೆಗಳ ಪ್ರಕಾರ, ಕರ್ನಾಟಕವು ನ್ಯಾಯಮಂಡಳಿಯ ಅಂತಿಮ ತೀರ್ಪಿನ ವಿರುದ್ಧ ಸುಪ್ರೀಂ ಕೋರ್ಟ್ ನಲ್ಲಿ ಮೇಲ್ಮನವಿ ಸಲ್ಲಿಸುವಾಗ 312 ಟಿಎಂಸಿ ಕೋರಿತ್ತು.

ವಕೀಲರ ಸಾಧನೆಯ ಮೌಲ್ಯಮಾಪನ: ಸಿಡಬ್ಲ್ಯುಡಿಟಿ ಹಂತದಲ್ಲಿ ಕರ್ನಾಟಕದ ವಕೀಲರು 465 ಟಿಎಂಸಿ ಸಮಗ್ರ ಬೇಡಿಕೆಯನ್ನು ಅಂಗೀಕರಿಸುವಂತೆ ಮಾಡಲಿಲ್ಲ. ಸುಪ್ರೀಂ ಮುಂದೆಯೂ ಮೇಲ್ಮನವಿ ಬೇಡಿಕೆಯನ್ನು ಸಂಪೂರ್ಣ ಅಂಗೀಕರಿಸಲಾಗಲಿಲ್ಲ. ಆದರೆ ಅಂತಿಮವಾಗಿ ಕರ್ನಾಟಕದ ಹಂಚಿಕೆ 284.75 ಟಿಎಂಸಿಗೆ ಹೆಚ್ಚಾದ ಹಿನ್ನೆಲೆಯಲ್ಲಿ, ಈ ವ್ಯಾಜ್ಯ ಸಂಪೂರ್ಣ ವೈಫಲ್ಯವಲ್ಲ.

ಕರ್ನಾಟಕದ ರಾಜ್ಯವಾರು ಕೊಡುಗೆ 790 ಟಿಎಂಸಿ ಕರ್ನಾಟಕವು ಕಾವೇರಿ ಹರಿವಿಗೆ ವಿವಿಧ ರಾಜ್ಯಗಳ ಕೊಡುಗೆಯ ಕುರಿತು ಈ ಮುಂದಿನ ಜಲವೈಜ್ಞಾನಿಕ ಅಂದಾಜನ್ನು ಸಂಬಂಧಿತ ಪ್ರಾಧಿಕಾರಗಳ ಮುಂದೆ ಮಂಡಿಸಿತು: ಕರ್ನಾಟಕ- 425 ಟಿಎಂಸಿ. ತಮಿಳುನಾಡು- 252 ಟಿಎಂಸಿ.

ಕೇರಳ- 113 ಟಿಎಂಸಿ. ಇವುಗಳ ಒಟ್ಟು 790 ಟಿಎಂಸಿ ಆಗುತ್ತದೆ. ಇದಕ್ಕೆ ವಿರುದ್ಧವಾಗಿ ತಮಿಳುನಾಡು ಮಂಡಿಸಿದ ಅಂದಾಜು ಹೀಗಿತ್ತು: ಕರ್ನಾಟಕದಿಂದ 392 ಟಿಎಂಸಿ, ತಮಿಳುನಾಡಿನಿಂದ 222 ಟಿಎಂಸಿ ಮತ್ತು ಕೇರಳದಿಂದ 126 ಟಿಎಂಸಿ, ಒಟ್ಟು 740. ಕಾವೇರಿ ವಾಸ್ತವಾಂಶ ಶೋಧನಾ ಸಮಿತಿಯು ಜಲಾನಯನ ಪ್ರದೇಶದ ದೀರ್ಘಕಾಲೀನ ಜಲವಿಜ್ಞಾನವನ್ನು ಪರಿಶೀಲಿಸಿ, ಸುಮಾರು 50% ವಿಶ್ವಾಸಾರ್ಹತೆಯಲ್ಲಿ 740 ಟಿಎಂಸಿ, 75% ವಿಶ್ವಾಸಾರ್ಹತೆಯಲ್ಲಿ 670 ಟಿಎಂಸಿ ಮತ್ತು 90% ವಿಶ್ವಾಸಾರ್ಹತೆಯಲ್ಲಿ 623 ಟಿಎಂಸಿ ಎಂದು ವಿಶ್ವಾಸಾರ್ಹ ಜಲಲಭ್ಯತೆ ಅಂದಾಜಿಸಿತು.

ನ್ಯಾಯಮಂಡಳಿ ಅಂತಿಮವಾಗಿ 740 ಟಿಎಂಸಿ ಅಂಕಿಯನ್ನು ಅಂಗೀಕರಿಸಿತು. ಆದ್ದರಿಂದ ಸಿಡಬ್ಲ್ಯುಡಿಟಿ 790 ಟಿಎಂಸಿ ಅಂದಾಜನ್ನು ಹಂಚಿಕೆಗೆ ಲಭ್ಯವಿರುವ ಜಲಪ್ರಮಾಣವೆಂದು ಅಂಗೀಕರಿಸಲಿಲ್ಲ. ಬದಲಾಗಿ ಅದು 50% ವಿಶ್ವಾಸಾರ್ಹತೆಯಲ್ಲಿ 740 ಟಿಎಂಸಿಯನ್ನು ಅಂಗೀಕರಿಸಿತು. ಸುಪ್ರೀಂ ಕೋರ್ಟ್ ಕೂಡ 740 ಟಿಎಂಸಿ ಚೌಕಟ್ಟನ್ನು ಬಹುಮಟ್ಟಿಗೆ ಉಳಿಸಿಕೊಂಡಿತು.

ಕರ್ನಾಟಕದ 790 ಟಿಎಂಸಿ ಕೊಡುಗೆ ಅಂದಾಜನ್ನು ನ್ಯಾಯಮಂಡಳಿಯ ಜಲಾನಯನ ಪ್ರದೇಶದ ಒಟ್ಟು ನಿರ್ಧಾರಕ್ಕೆ ಬದಲಾಗಿ ಬಳಸಲಿಲ್ಲ. ಬದಲಾಗಿ ನ್ಯಾಯಾಲಯವು ಸಮಾನ ಹಂಚಿಕೆ, ಅಂತರ್ಜಲ, ಐತಿಹಾಸಿಕ ಪರಿಸ್ಥಿತಿಗಳು ಮತ್ತು ರಾಜ್ಯಗಳ ಅಗತ್ಯಗಳನ್ನು ಪರಿಶೀಲಿಸಿತು.

ವಕೀಲರ ಸಾಧನೆಯ ಮೌಲ್ಯಮಾಪನ: ಕರ್ನಾಟಕದ ವಕೀಲರು 790 ಟಿಎಂಸಿಯನ್ನು ಕಾನೂನು ಬದ್ಧವಾಗಿ ಹಂಚಿಕೆಗೆ ಲಭ್ಯವಿರುವ ಜಲಪ್ರಮಾಣವೆಂದು ಸ್ಥಾಪಿಸುವಲ್ಲಿ ಯಶಸ್ವಿಯಾಗಲಿಲ್ಲ. ಆದರೆ ಕೊಡುಗೆಯ ಕುರಿತ ವಾದ ಅಪ್ರಸ್ತುತವಾಗಿರಲಿಲ್ಲ. ಸುಪ್ರೀಂ ಕೋರ್ಟ್ ಕರ್ನಾಟಕದ ಮೇಲ್ದಂಡೆಯ ರಾಜ್ಯ ಸ್ಥಾನವನ್ನು ಸ್ಪಷ್ಟವಾಗಿ ಗುರುತಿಸಿತು ಮತ್ತು ಅದರ ಐತಿಹಾಸಿಕ ನಿರ್ಬಂಧಗಳು ಹಾಗೂ ಕಾವೇರಿ ಮೇಲ್ಮೈ ನೀರಿಗೆ ಅದರ ಸೀಮಿತ ಪ್ರವೇಶವನ್ನು ಉಲ್ಲೇಖಿಸಿ ಅಂತಿಮವಾಗಿ ಹೆಚ್ಚುವರಿ 14.75 ಟಿಎಂಸಿ ನೀಡಿತು.

ಸುಪ್ರೀಂ ತೀರ್ಪು ಮೇಲ್ದಂಡೆಯ ರಾಜ್ಯವಾಗಿ ಕರ್ನಾಟಕದ ವಿಶಾಲ ಸ್ಥಾನಮಾನ ಮತ್ತು ಸಮಾನ ಹಂಚಿಕೆಯ ವಾದಗಳಿಗೆ ಗಣನೀಯ ಪರಿಗಣನೆ ನೀಡಿದ್ದು, ನ್ಯಾಯಮಂಡಳಿಯ ತೀರ್ಪನ್ನು ಕರ್ನಾಟಕದ ಪರವಾಗಿ ಪರಿಷ್ಕರಿಸುವಲ್ಲಿ ಅವು ಪ್ರಭಾವ ಬೀರಿದವು.

ಕರ್ನಾಟಕದ ನೀರಾವರಿ ಬೇಡಿಕೆ 408 ಟಿಎಂಸಿ ಕರ್ನಾಟಕದ ಅತಿ ದೊಡ್ಡ ಬೇಡಿಕೆ 408 ಟಿಎಂಸಿ ನೀರಾವರಿ ಬೇಡಿಕೆ. ನ್ಯಾಯಮಂಡಳಿ ನೀರಾವರಿ ಪ್ರದೇಶ, ಬೆಳೆ ಮಾದರಿಗಳು, ಬೆಳೆಗಳಿಗೆ ಬೇಕಾದ ನೀರಿನ ಪ್ರಮಾಣ, ಮಳೆ, ಬರ ಪರಿಸ್ಥಿತಿ, ನೀರಾವರಿ ದಕ್ಷತೆ ಮತ್ತು ಇತರ ರಾಜ್ಯಗಳ ಅಗತ್ಯಗಳನ್ನು ಪರಿಶೀಲಿಸಿತು. ಮುಖ್ಯವಾಗಿ, ನ್ಯಾಯಮಂಡಳಿಯು ಕರ್ನಾಟಕದ 408 ಟಿಎಂಸಿ ಬೇಡಿಕೆಯನ್ನು ನೇರವಾಗಿ ತನ್ನ ಹಂಚಿಕೆಯಾಗಿ ಪರಿವರ್ತಿಸಲಿಲ್ಲ.

ಅದು 18.85 ಲಕ್ಷ ಎಕರೆಗಳಿಗೆ 250.62 ಟಿಎಂಸಿ ನೀರಾವರಿ ಅಗತ್ಯವನ್ನು ನಿರ್ಧರಿಸಿತು. ನಂತರ ಸುಪ್ರೀಂ ಕೋರ್ಟ್ ಈ ವಿಷಯದಲ್ಲಿ ನ್ಯಾಯಮಂಡಳಿಯ ವಿಧಾನ ಮತ್ತು ಅಂದಾಜನ್ನು ಅಸಮರ್ಥನೀಯವೆಂದು ಪರಿಗಣಿಸಲಾಗುವುದಿಲ್ಲ ಎಂದು ಕಂಡು, ಅದರಲ್ಲಿ ಹಸ್ತಕ್ಷೇಪಿಸಲು ನಿರಾಕರಿಸಿತು. ಆದ್ದರಿಂದ ಸುಪ್ರೀಂ ಕೋರ್ಟ್ ಕರ್ನಾಟಕದ ಮೂಲ 408 ಟಿಎಂಸಿ ನೀರಾವರಿ ಬೇಡಿಕೆಯನ್ನು ಅಂಗೀಕರಿಸಲಿಲ್ಲ. ನ್ಯಾಯಾಲಯವು ನ್ಯಾಯಮಂಡಳಿಯ ಅಂದಾಜನ್ನು ಬಹುಮಟ್ಟಿಗೆ ಎತ್ತಿಹಿಡಿಯಿತು.

2018ರಲ್ಲಿ ನೀಡಲಾದ 14.75 ಟಿಎಂಸಿ ಹೆಚ್ಚಳ ನೀರಾವರಿ ಹಂಚಿಕೆಯಾಗಿರಲಿಲ್ಲ. ಆ ಹೆಚ್ಚುವರಿ 14.75 ಟಿಎಂಸಿ ಕೆಳಗಿನ ಅಂಶಗಳಿಂದ ಕೂಡಿದೆ ಎಂದು ನ್ಯಾಯಾಲಯ ಸ್ಪಷ್ಟಪಡಿಸಿತು- ತಮಿಳುನಾಡಿನಲ್ಲಿ ಲಭ್ಯವಿರುವ ಅಂತರ್ಜಲಕ್ಕೆ ಸಂಬಂಧಿಸಿದಂತೆ 10 ಟಿಎಂಸಿ; ಬೆಂಗಳೂರು ಸೇರಿದಂತೆ ಕುಡಿಯುವ ಮತ್ತು ಗೃಹಬಳಕೆಯ ಉದ್ದೇಶಗಳಿಗೆ 4.75 ಟಿಎಂಸಿ.

ವಕೀಲರ ಸಾಧನೆಯ ಮೌಲ್ಯಮಾಪನ: ಕರ್ನಾಟಕದ ವಕೀಲರು ಈ ಪ್ರಮುಖ ಬೇಡಿಕೆ ಸಾಧಿಸುವಲ್ಲಿ ಯಶಸ್ವಿಯಾಗಲಿಲ್ಲ. ಸುಪ್ರೀಂ ತೀರ್ಪು ಏನೆಂದರೆ, ಕರ್ನಾಟಕದ 408 ಟಿಎಂಸಿ ನೀರಾವರಿ ಬೇಡಿಕೆಯನ್ನು ಅಂಗೀಕರಿಸಲಾಗಲಿಲ್ಲ; ಅದು ಈಗಾಗಲೇ ಸಿಡಬ್ಲ್ಯುಡಿಟಿ ಮುಂದೆ ವಿಫಲವಾಗಿತ್ತು. ಆದರೆ ಕರ್ನಾಟಕದ ಕಾನೂನು ವಾದವು ಅದರ ಗಣನೀಯ ನೀರಾವರಿ ಅಗತ್ಯಗಳಿಗೆ ಮಾನ್ಯತೆ ಪಡೆಯುವಲ್ಲಿ ಮತ್ತು ಅದರ ಬರ ಪರಿಸ್ಥಿತಿ ಹಾಗೂ ಹಿಂದುಳಿದ ಅಭಿವೃದ್ಧಿಯನ್ನು ನ್ಯಾಯಾಲಯದ ಮುಂದಿಡುವಲ್ಲಿ ಯಶಸ್ವಿಯಾಯಿತು.

ಬೆಂಗಳೂರು ಕುಡಿಯುವ ನೀರಿಗೆ 30 ಟಿಎಂಸಿ ಕರ್ನಾಟಕವು ಬೆಂಗಳೂರಿಗಾಗಿ 30 ಟಿಎಂಸಿ ಬೇಡಿಕೆ ಮಾಡಿತ್ತು. ನ್ಯಾಯಮಂಡಳಿ ಬೆಂಗಳೂರಿನ ಒಂದು ಭಾಗ ಮಾತ್ರ ಕಾವೇರಿ ಜಲಾನಯನ ಪ್ರದೇಶದಲ್ಲಿದೆ ಎಂಬ ಕಾರಣಕ್ಕೆ ಈ ಬೇಡಿಕೆಯನ್ನು ಗಣನೀಯವಾಗಿ ಸೀಮಿತಗೊಳಿಸಿತು ಮತ್ತು ಕುಡಿಯುವ ನೀರಿನ ಗಮನಾರ್ಹ ಭಾಗವನ್ನು ಅಂತರ್ಜಲದಿಂದ ಪೂರೈಸಬಹುದು ಎಂದು ಪರಿಗಣಿಸಿತು.

ನ್ಯಾಯಮಂಡಳಿ 2011ರ ಮೌಲ್ಯಮಾಪನದಲ್ಲಿ ಕರ್ನಾಟಕದ ಗೃಹಬಳಕೆ ಮತ್ತು ಕೈಗಾರಿಕಾ ಅಗತ್ಯಗಳಿಗೆ ಅಂತಿಮವಾಗಿ ಕೇವಲ 1.85 ಟಿಎಂಸಿ ನೀಡಿತು. ಬೆಂಗಳೂರಿಗೆ ಸಂಬಂಧಿಸಿದ ನ್ಯಾಯಮಂಡಳಿಯ ವಿಧಾನವನ್ನು ಸುಪ್ರೀಂ ಕೋರ್ಟ್ ಅಸಮರ್ಥನೀಯವೆಂದು ತಿರಸ್ಕರಿಸಿತು. ಬೆಂಗಳೂರಿನ ಕೇವಲ ಮೂರನೇ ಒಂದು ಭಾಗ ಜಲಾನಯನ ಪ್ರದೇಶದಲ್ಲಿದೆ ಎಂಬ ಭೌಗೋಳಿಕ ವಾಸ್ತವಾಂಶವು ಅದರ ವ್ಯಾಪಕ ಜನಸಂಖ್ಯೆಯ ಕುಡಿಯುವ ನೀರಿನ ಅಗತ್ಯವನ್ನು ನಿರಾಕರಿಸಲು ಕಾರಣವಾಗುವುದಿಲ್ಲ ಎಂದಿತು.

ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ಇದೆ ಎಂದೂ ಪರಿಗಣಿಸಿತು. ಪರಿಣಾಮ, ಬೆಂಗಳೂರು ಸೇರಿದಂತೆ ಕರ್ನಾಟಕದ ಕುಡಿಯುವ ಮತ್ತು ಗೃಹಬಳಕೆ ಅಗತ್ಯಗಳಿಗಾಗಿ ನ್ಯಾಯಾಲಯ ಹೆಚ್ಚುವರಿ 4.75 ಟಿಎಂಸಿ ನೀಡಿತು.

ವಕೀಲರ ಸಾಧನೆ: ಇದು ಭಾಗಶಃ ಯಶಸ್ಸು. ಕರ್ನಾಟಕ ಬೇಡಿದ 30 ಟಿಎಂಸಿ ಪಡೆಯಲಿಲ್ಲ. ಆದರೆ ವಕೀಲರು ಬೆಂಗಳೂರಿನ ಅಗತ್ಯಗಳಿಗೆ ನ್ಯಾಯಮಂಡಳಿಯ ಸೀಮಿತ ದೃಷ್ಟಿಕೋನವನ್ನು ತಿರಸ್ಕರಿಸುವಂತೆ ಮತ್ತು ನಗರದ ಕುಡಿಯುವ ನೀರಿನ ಅಗತ್ಯಗಳನ್ನು ರಾಜ್ಯವ್ಯಾಪಿ ಆಧಾರದ ಮೇಲೆ ಗುರುತಿಸುವಂತೆ ಸುಪ್ರೀಂ ಕೋರ್ಟ್‌ಗೆ ಮನವರಿಕೆ ಮಾಡಿದರು.

ನಗರ, ಗ್ರಾಮೀಣ ಮತ್ತು ಕೈಗಾರಿಕಾ ಬೇಡಿಕೆ ಕರ್ನಾಟಕವು ಪ್ರತ್ಯೇಕವಾಗಿ ಈ ಬೇಡಿಕೆಗಳನ್ನು ಮಾಡಿತ್ತು: 10 ಟಿಎಂಸಿ- ಬೆಂಗಳೂರನ್ನು ಹೊರತುಪಡಿಸಿದ ನಗರ ನೀರು ಪೂರೈಕೆಗಾಗಿ; 6 ಟಿಎಂಸಿ- ಗ್ರಾಮೀಣ ನೀರು ಪೂರೈಕೆಗಾಗಿ ಮತ್ತು 4 ಟಿಎಂಸಿ- ಕೈಗಾರಿಕಾ ಬಳಕೆಗಾಗಿ. ಇವು 465 ಟಿಎಂಸಿ ಸಮಗ್ರ ಬೇಡಿಕೆಯ ಭಾಗವಾಗಿದ್ದವು. ಸುಪ್ರೀಂ ಕೋರ್ಟ್ ಅವುಗಳನ್ನು ಸ್ಪಷ್ಟವಾಗಿ ದಾಖಲಿಸಿತು. ನ್ಯಾಯಮಂಡಳಿ 2011ರ ಮೌಲ್ಯಮಾಪನದಲ್ಲಿ ಕರ್ನಾಟಕದ ಗೃಹಬಳಕೆ ಮತ್ತು ಕೈಗಾರಿಕಾ ಅಗತ್ಯಗಳನ್ನು 1.85 ಟಿಎಂಸಿ ಎಂದು ಅಂದಾಜಿಸಿತು. ಕೋರ್ಟ್ ಈ ವಿಭಾಗಗಳಡಿ ಕೇಳಲಾದ ಪ್ರಮಾಣವನ್ನು ನೀಡಲಿಲ್ಲ. ಅದರ ಪ್ರಮುಖ ಹಸ್ತಕ್ಷೇಪವೆಂದರೆ, ವಿಶೇಷವಾಗಿ ಬೆಂಗಳೂರಿನ ಅಗತ್ಯ ಗಮನದಲ್ಲಿಟ್ಟುಕೊಂಡು, ಕುಡಿಯುವ ಮತ್ತು ಗೃಹಬಳಕೆಯ ಉದ್ದೇಶಗಳಿಗೆ ಹೆಚ್ಚುವರಿ 4.75 ಟಿಎಂಸಿ ನೀಡಿದ್ದು.

ವಕೀಲರ ಸಾಧನೆಯ ಮೌಲ್ಯ ಮಾಪನ: ಭಾಗಶಃ ಯಶಸ್ಸು. ಕರ್ನಾಟಕವು ಕುಡಿಯುವ ನೀರಿನ ಅಗತ್ಯಗಳಿಗೆ ಅರ್ಥ ಪೂರ್ಣ ನ್ಯಾಯಾಂಗ ಮಾನ್ಯತೆ ಪಡೆಯಿತು. ಆದರೆ ಕೇಳಿದ ಒಟ್ಟು 20 ಟಿಎಂಸಿಯನ್ನು ಪಡೆಯಲಿಲ್ಲ.

ವಿದ್ಯುತ್ ಸಂಬಂಧಿತ ಬೇಡಿಕೆ 7 ಟಿಎಂಸಿ ಕರ್ನಾಟಕದ ಮೂಲ 465 ಟಿಎಂಸಿ ಬೇಡಿಕೆಯಲ್ಲಿ ಮುಂದಿನವು ಸೇರಿದ್ದವು: ವಿದ್ಯುತ್ ಯೋಜನೆಗಳಿಗೆ ಸಂಬಂಧಿಸಿದ ಜಲಾಶಯ ನಷ್ಟಕ್ಕಾಗಿ 6 ಟಿಎಂಸಿ; ಉಷ್ಣ ವಿದ್ಯುತ್ ಯೋಜನೆಗಾಗಿ 1 ಟಿಎಂಸಿ. ಈ ಬೇಡಿಕೆಗಳು ಕರ್ನಾಟಕಕ್ಕೆ ಹೆಚ್ಚುವರಿ ಹಂಚಿಕೆಗೆ ಕಾರಣವಾಗಲಿಲ್ಲ. ಸುಪ್ರೀಂ ಕೋರ್ಟ್ ಪ್ರತ್ಯೇಕ ಪ್ರಮಾಣವನ್ನು ಸೇರಿಸಲಿಲ್ಲ.

ವಕೀಲರ ಸಾಧನೆಯ ಮೌಲ್ಯಮಾಪನ: ನಿರ್ದಿಷ್ಟ 7 ಟಿಎಂಸಿ ಬೇಡಿಕೆಯಲ್ಲಿ ಗುರುತಿಸಬಹುದಾದ ಯಶಸ್ಸು ಇಲ್ಲ. ಅವುಗಳನ್ನು ಸಮಾನ ಹಂಚಿಕೆ ಚೌಕಟ್ಟಿನೊಳಗೆ ಪ್ರತ್ಯೇಕ ಪರಿಗಣಿಸಲಾಯಿತು.

1892 ಮತ್ತು 1924ರ ಒಪ್ಪಂದಗಳು ಇದು ಕರ್ನಾಟಕದ ಅತ್ಯಂತ ಮೂಲಭೂತ ಕಾನೂನು ಸವಾಲುಗಳಲ್ಲಿ ಒಂದಾಗಿತ್ತು. ಮೈಸೂರು ಮತ್ತು ಮದ್ರಾಸ್‌ನ ಹಿಂದಿನ ಸರಕಾರಗಳ ನಡುವಿನ ಐತಿಹಾಸಿಕ ಒಪ್ಪಂದಗಳ ಮುಂದುವರಿದ ಪರಿಣಾಮವನ್ನು ಕರ್ನಾಟಕ ಪ್ರಶ್ನಿಸಿತು. ಒಪ್ಪಂದಗಳು ಹಳೆಯವು ಎಂಬ ಕಾರಣಕ್ಕೆ ಅವುಗಳನ್ನು ಅಮಾನ್ಯವೆಂದು ಘೋಷಿಸಲು ನ್ಯಾಯಮಂಡಳಿ ನಿರಾಕರಿಸಿತು. ಆದರೆ ಅವುಗಳ ವಿsಗಳನ್ನು ಮರುಪರಿಶೀಲಿಸಿತು.

ತನ್ನ ಅಂತಿಮ ತೀರ್ಪು 1892 ಮತ್ತು 1924ರ ಒಪ್ಪಂದಗಳನ್ನು ಮೀರಿಸುತ್ತದೆ ಎಂದು ಸ್ಪಷ್ಟಪಡಿಸಿತು. ಸುಪ್ರೀಂ ಕೋರ್ಟ್ ಹೆಚ್ಚು ಸೂಕ್ಷ್ಮವಾದ ನಿಲುವು ತೆಗೆದುಕೊಂಡಿತು. ಸ್ವಾತಂತ್ರ್ಯ ಅಥವಾ ರಾಜ್ಯ ಪುನರ್ರಚನೆಯ ನಂತರ ಈ ಒಪ್ಪಂದಗಳು ಸಂಪೂರ್ಣವಾಗಿ ಅಸ್ತಿತ್ವ ಕಳೆದುಕೊಂಡಿಲ್ಲ ಎಂದು ಅದು ಹೇಳಿತು. ಆದರೆ 1924ರ ಒಪ್ಪಂದಕ್ಕೆ 50 ವರ್ಷಗಳ ನಿಗದಿತ ಅವಧಿ ಇದ್ದು, ಅದು 1974ರಲ್ಲಿ ಮುಕ್ತಾಯಗೊಂಡಿದೆ ಎಂದಿತು. ಪೂರ್ವಸಿದ್ಧ ಹಕ್ಕುಗಳ ಆಧಾರದ ಮೇಲೆ ಮಾತ್ರ ಪ್ರಸ್ತುತ ಹಂಚಿಕೆಯನ್ನು ನಿರ್ಧರಿಸುವುದನ್ನು ತಿರಸ್ಕರಿಸಿತು.

ವಕೀಲರ ಸಾಧನೆ: ಕರ್ನಾಟಕ ಐತಿಹಾಸಿಕ ಒಪ್ಪಂದಗಳನ್ನು ಸಂಪೂರ್ಣವಾಗಿ ರದ್ದುಪಡಿಸುವಲ್ಲಿ ಯಶಸ್ವಿಯಾಗಲಿಲ್ಲ. ಆದರೆ ಪ್ರಸ್ತುತ ಹಂಚಿಕೆಯನ್ನು ಸಮಾನ ಹಂಚಿಕೆ ಮತ್ತು ಜಲಾನಯನ ಪ್ರದೇಶದ ರಾಜ್ಯಗಳ ಸಮಾನ ಸ್ಥಾನಮಾನದ ಆಧಾರದ ಮೇಲೆ ನಿರ್ಧರಿಸಬೇಕು, ಐತಿಹಾಸಿಕ ಬಳಕೆಯನ್ನು ಅಚಲವಾದ ಹಕ್ಕಾಗಿ ಜಾರಿಗೊಳಿಸುವ ಮೂಲಕ ಅಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿತು. ಸುಪ್ರೀಂ ತೀರ್ಪು ಕರ್ನಾಟಕಕ್ಕೆ ಭಾಗಶಃ ಆದರೆ ಮಹತ್ವದ ಕಾನೂನು ಯಶಸ್ಸನ್ನು ತಂದಿತು. ಕರ್ನಾಟಕದ ಕಾನೂನು ನಿಲುವಿನ ಪ್ರಮುಖ ಅಂಶಗಳನ್ನು ನ್ಯಾಯಾಲಯ ಗುರುತಿಸಿತು.

ಬಳಕೆ ಮತ್ತು ಪೂರ್ವಸಿದ್ಧ ಹಕ್ಕುಗಳು ತಮಿಳುನಾಡಿನ ಕಾವೇರಿ ನೀರಿನ ಐತಿಹಾಸಿಕ ಬಳಕೆಯು ಕರ್ನಾಟಕದ ನ್ಯಾಯಸಮ್ಮತ ಬಳಕೆಗಳನ್ನು ಅಭಿವೃದ್ಧಿಪಡಿಸುವ ಹಕ್ಕನ್ನು ತಡೆಯುವ ಅಚಲ ಹಕ್ಕಾಗಿ ಪರಿಣಮಿಸಲು ಸಾಧ್ಯವಿಲ್ಲ ಎಂಬುದು ಕರ್ನಾಟಕದ ವಾದವಾಗಿತ್ತು. ನ್ಯಾಯಮಂಡಳಿಯು ಐತಿಹಾಸಿಕ ಬಳಕೆಯನ್ನು ಪ್ರಸ್ತುತ ಬಳಕೆ, ನೀರಾವರಿ ಅಭಿವೃದ್ಧಿ ಮತ್ತು ಐತಿಹಾಸಿಕ ಒಪ್ಪಂದಗಳ ವಿಧಿಗಳೊಂದಿಗೆ ಪರಿಶೀಲಿಸಿತು. ಅದು ಸಮಾನ ಹಂಚಿಕೆಯ ತತ್ವಗಳನ್ನು ಅನುಸರಿಸುವಾಗ ಐತಿಹಾಸಿಕ ಬಳಕೆಯನ್ನು ಸಂಬಂಧಿತ ಅಂಶಗಳಲ್ಲಿ ಒಂದಾಗಿ ಪರಿಗಣಿಸಿತು.

ಇಲ್ಲಿ ಕರ್ನಾಟಕದ ಕಾನೂನು ನಿಲುವಿಗೆ ಬಲವಾದ ಮಾನ್ಯತೆ ದೊರೆಯಿತು. ಸಮಾನ ಹಂಚಿಕೆಯ ವಿಕಾಸದೊಂದಿಗೆ ಪೂರ್ವಸಿದ್ಧ ಹಕ್ಕು ಅಥವಾ ಅಂತಾರಾಜ್ಯ ನದಿಯ ಸಹಜ ಹರಿವಿನ ಮೇಲಿನ ಹಕ್ಕು ಹಂಚಿಕೆಯನ್ನು ನಿಯಂತ್ರಿಸುವ ತತ್ವವಾಗಿಲ್ಲ ಎಂದು ನ್ಯಾಯಾಲಯ ಹೇಳಿತು. ಕರ್ನಾಟಕವು ಮೇಲ್ದಂಡೆಯ ರಾಜ್ಯವಾಗಿ ಅನುಭವಿಸಿದ ಐತಿಹಾಸಿಕ ನಿರ್ಬಂಧಗಳು ಮತ್ತು ಅದರ ಬರ ಪರಿಸ್ಥಿತಿಗಳನ್ನೂ ನ್ಯಾಯಾಲಯ ಸ್ಪಷ್ಟವಾಗಿ ಉಲ್ಲೇಖಿಸಿತು.

ವಕೀಲರ ಸಾಧನೆ: ಇದು ಕರ್ನಾಟಕದ ವಿಶಾಲ ಕಾನೂನು ವಾದಕ್ಕೆ ಗಣನೀಯ ಯಶಸ್ಸು. ಈ ತತ್ವದ ಆಧಾರದ ಮೇಲೆ ಮಾತ್ರ ಕರ್ನಾಟಕದ ಸಂಪೂರ್ಣ ಹಂಚಿಕೆ ಬೇಡಿಕೆಯನ್ನು ನ್ಯಾಯಾಲಯ ಅಂಗೀಕರಿಸಲಿಲ್ಲ. ಆದರೆ ಈ ತತ್ವವು ಕರ್ನಾಟಕಕ್ಕೆ ಹೆಚ್ಚುವರಿ 14.75 ಟಿಎಂಸಿ ಪಡೆಯಲು ಗಣನೀಯವಾಗಿ ನೆರವಾಯಿತು.

- **ಕೆ.ವಿ.**ಚಂದ್ರಮೌಳಿ



# ಪ್ರತಿ ವರ್ಷ ವಾಣಿಜ್ಯ ಬೆಳೆ ಸಮೀಕ್ಷೆ ಬೇಡ

## ಪ್ರಯೋಜನಗಳ ಕುರಿತು ಸರ್ಕಾರ ಮರು ಪರಿಶೀಲಿಸಬೇಕು: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಸಕಲೇಶಪುರ:** ಮಲೆನಾಡು ಪ್ರದೇಶದಲ್ಲಿ ಪ್ರತಿ ವರ್ಷ ಬಹುವಾರ್ಷಿಕ ವಾಣಿಜ್ಯ ಬೆಳೆ ಸಮೀಕ್ಷೆ ನಡೆಸುವ ಅಗತ್ಯ ಹಾಗೂ ಅದರ ವೈಜ್ಞಾನಿಕ ಮತ್ತು ಆಡಳಿತಾತ್ಮಕ ಪ್ರಯೋಜನಗಳ ಕುರಿತು ಸರ್ಕಾರ ಮರು ಪರಿಶೀಲಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.



ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ನಡೆದ ಬೆಳೆ ಸಮೀಕ್ಷೆದಾರರು ಹಾಗೂ ಮೇಲ್ವಿಚಾರಕರ ತರಬೇತಿ ಮತ್ತು ಪೂರ್ವಸಿದ್ಧತಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಕಲೇಶಪುರ ತಾಲ್ಲೂಕು ಸಂಪೂರ್ಣ ಮಲೆನಾಡು ಪ್ರದೇಶವಾಗಿದ್ದು, ಇಲ್ಲಿನ ಹವಾಮಾನಕ್ಕೆ ಅನುಗುಣವಾಗಿ ವಿವಿಧ ಬಹುವಾರ್ಷಿಕ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಈ ಬೆಳೆಗಳನ್ನು ಸ್ಥಾಪಿಸಲು ರೈತರು ಆರಂಭದಲ್ಲಿಯೇ ಹೆಚ್ಚಿನ ಬಂಡವಾಳ ಹೂಡಿಕೆ ಮಾಡುವುದರಿಂದ ವರ್ಷದಿಂದ ವರ್ಷಕ್ಕೆ ಬೆಳೆ ಬದಲಿಸುವ ಪದ್ಧತಿ ಸಾಮಾನ್ಯವಾಗಿಲ್ಲ. ಬಹುತೇಕ ತೋಟಗಳಲ್ಲಿ 3035 ವರ್ಷಗಳವರೆಗೆ ಯಥಾ ಬೆಳೆ ಪದ್ಧತಿ ಮುಂದುವರಿಯುತ್ತದೆ. ಹೀಗಾಗಿ ಪ್ರತಿ ವರ್ಷ ಬೆಳೆ ಸಮೀಕ್ಷೆ ನಡೆಸುವ ಅಗತ್ಯವನ್ನು ಅಧಿಕಾರಿಗಳು ಸರ್ಕಾರದ ಗಮನಕ್ಕೆ ತರಬೇಕು ಎಂದು ಅವರು ಸಲಹೆ ನೀಡಿದರು.

ಮಲೆನಾಡಿನ ಗುಡ್ಡಗಾಡು ಪ್ರದೇಶಗಳು, ಹಳ್ಳ- ಕಂದಕಗಳು ಹಾಗೂ ಕಾಡುಪ್ರಾಣಿಗಳ ಹಾವಳಿ ಇರುವ ಪ್ರದೇಶಗಳಲ್ಲಿ ಸಮೀಕ್ಷೆದಾರರು ಕಾರ್ಯ ನಿರ್ವಹಿಸುತ್ತಿರುವುದರಿಂದ ಅವರ ಸುರಕ್ಷತೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಹಾವು, ಆನೆ ಹಾಗೂ ಕಾಡುಕೋಣಗಳ ಹಾವಳಿ ಇರುವ ಪ್ರದೇಶಗಳಲ್ಲಿ ವಿಶೇಷ ಮುನ್ನೆಚ್ಚರಿಕೆ ವಹಿಸಬೇಕು. ಪ್ರತಿದಿನ ಕಾಫಿ ತೋಟಗಳಲ್ಲಿ ಕೂಲಿ ಕೆಲಸ ಮಾಡುವುದಕ್ಕಿಂತಲೂ ಕಡಿಮೆ ಗೌರವ ಧನಕ್ಕೆ ಸಮೀಕ್ಷೆದಾರರು ಕಾರ್ಯ ನಿರ್ವಹಿಸುತ್ತಿರುವುದು ಕಳವಳಕಾರಿ. ಒಂದು ಸಮೀಕ್ಷೆಗೆ ಗರಿಷ್ಠ 21 ರೂ. ಗೌರವಧನ ದೊರೆಯುತ್ತಿದ್ದು, ಇದನ್ನು ಪರಿಷ್ಕರಿಸಿ ನ್ಯಾಯಯುತ ಗೌರವಧನ ನಿಗದಿಪಡಿಸಬೇಕು ಎಂದು ಅವರು ಒತ್ತಾಯಿಸಿದರು.

ಕಾಫಿ ಬೆಳೆಗಾರರ ಸಂಘದ ಕಸಬಾ ಹೋಬಳಿ ಅಧ್ಯಕ್ಷ ಮೇಘರಾಜ್ ಅವರು ಮಾತನಾಡಿ, ತೋಟದಿಂದ ತೋಟಕ್ಕೆ ತೆರಳಿ ಸಮೀಕ್ಷೆ ನಡೆಸುವುದು ಸವಾಲಿನ ಕೆಲಸವಾಗಿದ್ದು, ತೋಟಗಳ ಒಳಭಾಗದಲ್ಲಿ ಜಿಪಿಎಸ್ ಸಿಗ್ನಲ್ ಸಮರ್ಪಕವಾಗಿ ದೊರೆಯದಿರುವುದು ಹಾಗೂ ಕೆಲವೆಡೆ ಪ್ರವೇಶಕ್ಕೆ ಅವಕಾಶ ನೀಡದಿರುವುದು ಸಮಸ್ಯೆಯಾಗಿದೆ. ಒಂದು ತಾಕಿನ ಬೆಳೆ ಸಮೀಕ್ಷೆಗೆ ಕನಿಷ್ಠ 50 ರೂ. ಗೌರವಧನ ನಿಗದಿಪಡಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಹೆತ್ತೂರು ದೇವರಾಜು, ಸಹಾಯಕ ಕೃಷಿ ನಿರ್ದೇಶಕ ಯು.ಎಂ.ಪ್ರಕಾಶ್ ಕುಮಾರ್, ಸಹಾಯಕ ತೋಟಗಾರಿಕಾ ಅಧಿಕಾರಿ ನಿತಿನ್ ಹಾಗೂ ಕೃಷಿ ಅಧಿಕಾರಿ ಕೇಶವಮೂರ್ತಿ, ಉಪತಹಶೀಲ್ದಾರ್ ಸುನಿಲ್, ಕೃಷಿ, ಕಂದಾಯ ಹಾಗೂ ತೋಟಗಾರಿಕೆ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಕೃಷಿ ಸಖಿಯರು ಮತ್ತು ಬೆಳೆ ಸಮೀಕ್ಷೆದಾರರು ಉಪಸ್ಥಿತರಿದ್ದರು.

# ಅಫ್ಘಾನ್ ವಿರುದ್ಧದ ಟಿ 20 ಸರಣಿ; ಬುಮ್ರಾ ರಾಣಾ ಮತ್ತೆ ತಂಡಕ್ಕೆ

• ಪ್ರಜೋದಯ ವರದಿ

**ನವದೆಹಲಿ:** ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯ ಆಯ್ಕೆ ಸಮಿತಿಯು ಮಂಗಳವಾರ ಅಫ್ಘಾನಿಸ್ತಾನ ವಿರುದ್ಧದ ಮೂರು ಪಂದ್ಯಗಳ ಟಿ20 ಸರಣಿಗೆ ಭಾರತ ತಂಡವನ್ನು ಪ್ರಕಟಿಸಿದ್ದು, ಈ ಬಾರಿ 15 ವರ್ಷದ ಬ್ಯಾಟಿಂಗ್ ಸೆನ್ಸೇಷನ್ ವೈಭವ್ ಸೂರ್ಯವಂಶಿಗೂ ತಂಡದಲ್ಲಿ ಅವಕಾಶ ನೀಡಲಾಗಿದೆ.

ಅಫ್ಘಾನ್ ವಿರುದ್ಧದ ಟಿ20 ಸರಣಿಯು ಸೆಪ್ಟೆಂಬರ್ 13 ರಂದು ದೆಹಲಿಯಲ್ಲಿ ಆರಂಭವಾಗಲಿದ್ದು, ಈ ಸರಣಿಯು 2026 ರ ಏಷ್ಯನ್ ಕ್ರೀಡಾಕೂಟಕ್ಕೂ ಮುನ್ನ ನಡೆಯಲಿರುವುದು ವಿಶೇಷ.

ಇನ್ನು ಗಾಯದಿಂದಾಗಿ ವಿರಾಮ ಪಡೆದಿದ್ದ ಜಸ್ಪ್ರೀತ್ ಬುಮ್ರಾ ಜೊತೆಗೆ ಜೊತೆಗೆ, ನಿತೀಶ್ ಕುಮಾರ್ ರೆಡ್ಡಿ, ವಾಷಿಂಗ್ಟನ್ ಸುಂದರ್ ಮತ್ತು ಹರ್ಷಿತ್ ರಾಣಾ ಅವರು ಸಹ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಆದರೆ, ಅವರ ಅಂತಿಮ ಲಭ್ಯತೆಯು ಫಿಟ್‌ನೆಸ್ ಕ್ಲಿಯರೆನ್ಸ್‌ಗೆ ಒಳಪಟ್ಟಿರುತ್ತದೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ.

# ಅಜೋಲಾ ತಯಾರಿಕೆ ವಿಧಾನ ಪ್ರಾತ್ಯಕ್ಷಿಕೆ



## ರೈತರಿಗೆ ಪ್ರಾಯೋಗಿಕ ಅರಿವು

• ಪ್ರಜೋದಯ ವರದಿ

**ಕತ್ತರಿಘಟ್ಟ:** ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದ ಅಂಗವಾಗಿ ಗ್ರಾಮದಲ್ಲಿ ಮಂಗಳವಾರ ರೈತರಿಗೆ ಅಜೋಲಾ ಬೆಳೆಸುವ ವಿಧಾನ ಕುರಿತು ವಿಧಾನ ಪ್ರಾತ್ಯಕ್ಷಿಕೆ ನಡೆಸಲಾಯಿತು. ಕಾರ್ಯಕ್ರಮದಲ್ಲಿ ಗ್ರಾಮದ ರೈತರ ಸಮ್ಮುಖದಲ್ಲಿ ಅಜೋಲಾ ಘಟಕ ಸ್ಥಾಪನೆಯಿಂದ ಹಿಡಿದು ಅದರ ನಿರ್ವಹಣೆ ಹಾಗೂ ಬಳಕೆಯವರೆಗಿನ ಸಂಪೂರ್ಣ ಪ್ರಕ್ರಿಯೆಯನ್ನು ಪ್ರಾಯೋಗಿಕವಾಗಿ ವಿವರಿಸಲಾಯಿತು.

ಪ್ರಾತ್ಯಕ್ಷಿಕೆಯಲ್ಲಿ ಅಜೋಲಾ ಬೆಳೆಯಲು ಅಗತ್ಯವಿರುವ ತೊಟ್ಟಿ/ ಗುಂಡಿ ಸಿದ್ಧತೆ, ಮಣ್ಣು, ನೀರು, ಸಾವಯವ ಗೊಬ್ಬರ ಹಾಗೂ ಅಜೋಲಾ ಬೀಜದ್ರವ್ಯದ ಪ್ರಮಾಣ ಮತ್ತು ಹಾಕುವ ವಿಧಾನವನ್ನು ನೇರವಾಗಿ ತೋರಿಸಲಾಯಿತು. ಅಜೋಲಾದ ಸಂಯೋಜನೆಯನ್ನು ರೈತರಿಗೆ ವಿವರಿಸುವುದರ ಜೊತೆಗೆ, ಅಜೋಲಾವನ್ನು ಹೇಗೆ ನಿರ್ವಹಿಸಬೇಕು, ನಿಯಮಿತವಾಗಿ ನೀರಿನ ಮಟ್ಟವನ್ನು ಕಾಪಾಡಿಕೊಳ್ಳುವುದು ಹಾಗೂ ಸೂಕ್ತ ಸಮಯದಲ್ಲಿ ಕೊಯ್ಲು ಮಾಡುವ ವಿಧಾನವನ್ನು ತಿಳಿಸಲಾಯಿತು.

ಅಜೋಲಾ ಪೌಷ್ಟಿಕಾಂಶಗಳಿಂದ ಸಮೃದ್ಧವಾಗಿದ್ದು, ಜಾನುವಾರುಗಳಿಗೆ ಆಹಾರವಾಗಿ ಹಾಗೂ ಕೃಷಿಯಲ್ಲಿ ಸಾವಯವ ಸಂಪನ್ಮೂಲವಾಗಿ ಬಳಸಬಹುದಾಗಿದೆ. ಕಡಿಮೆ ವೆಚ್ಚದಲ್ಲಿ ಮನೆಯಲ್ಲಿಯೇ ಅಜೋಲಾವನ್ನು ಬೆಳೆಸಿಕೊಂಡು ಕೃಷಿ ಮತ್ತು ಪಶು ಸಂಗೋಪನೆಯಲ್ಲಿ ಬಳಸುವುದರಿಂದ ರೈತರಿಗೆ ಹೆಚ್ಚುವರಿ ಪ್ರಯೋಜನ ದೊರೆಯುತ್ತದೆ ಎಂದು ರೈತರಿಗೆ ತಿಳಿಸಲಾಯಿತು.

ವಿಧಾನ ಪ್ರಾತ್ಯಕ್ಷಿಕೆಯ ಸಂದರ್ಭದಲ್ಲಿ ರೈತರು ಉತ್ಸಾಹದಿಂದ ಭಾಗವಹಿಸಿ, ಅಜೋಲಾ ಬೆಳೆಯುವ ವಿಧಾನ, ನಿರ್ವಹಣೆ ಮತ್ತು ಬಳಕೆಗೆ ಸಂಬಂಧಿಸಿದ ವಿವಿಧ ಪ್ರಶ್ನೆಗಳನ್ನು ಕೇಳಿದರು. ಪ್ರಾತ್ಯಕ್ಷಿಕೆಯ ಮೂಲಕ ರೈತರಿಗೆ ಅಜೋಲಾ ಉತ್ಪಾದನೆಯ ಕುರಿತು ಪ್ರಾಯೋಗಿಕ ಜ್ಞಾನ ಮತ್ತು ಆತ್ಮವಿಶ್ವಾಸ ಮೂಡಿಸಲಾಯಿತು.

# ದುರಸ್ತಿ ಕಾಣದ ಸ್ಕ್ಯಾನಿಂಗ್ ಯಂತ್ರ: ಸೆ.4ಕ್ಕೆ ಮೌನ ಪ್ರತಿಭಟನೆ

• ಪ್ರಜೋದಯ ವರದಿ

**ಸಕಲೇಶಪುರ:** ಸರ್ಕಾರಿ ಆಸ್ಪತ್ರೆಯಲ್ಲಿ ಒಂಬತ್ತು ವರ್ಷಗಳಿಂದ ಸ್ಥಗಿತಗೊಂಡಿರುವ ಸ್ಕ್ಯಾನಿಂಗ್ ಯಂತ್ರದ ದುರಸ್ತಿಗೆ ಆಗ್ರಹಿಸಿ ನಡೆದ ಪ್ರತಿಭಟನೆ ವೇಳೆ ಅಧಿಕಾರಿಗಳು ನೀಡಿದ್ದ 15 ದಿನಗಳ ಗಡುವು ಪೂರ್ಣಗೊಂಡರೂ ಶಾಶ್ವತ ಕ್ರಮ ಕೈಗೊಂಡಿಲ್ಲ ಎಂದು ಸಾಮಾಜಿಕ ಹೋರಾಟಗಾರ ಯಡೇಹಳ್ಳಿ ಮಂಜುನಾಥ್ ಆರೋಪಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿನ್ನೆಲೆಯಲ್ಲಿ ಗುರುವಾರ ಬೆಳಿಗ್ಗೆ 10.30ಕ್ಕೆ ಸರ್ಕಾರಿ ಆಸ್ಪತ್ರೆ ಸಮೀಪದ ಉದ್ಯಾನವನದ ಬಳಿ ಸಾಮಾಜಿಕ ಹೋರಾಟಗಾರರು ಹಾಗೂ ವಿವಿಧ ಸಂಘಟನೆಗಳ ಪ್ರಮುಖರು ಮೌನ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ. ಅಧಿಕಾರಿಗಳ ಭರವಸೆಯ ಹಿನ್ನೆಲೆಯಲ್ಲಿ ಹಿಂದಿನ ಪ್ರತಿಭಟನೆ ಹಿಂಪಡೆಯಲಾಗಿತ್ತು. ಆದರೆ ಗಡುವು ಮುಗಿದರೂ ಯಂತ್ರದ ಸಮಸ್ಯೆ ಬಗೆಹರಿಯದ ಹಿನ್ನೆಲೆಯಲ್ಲಿ ಮತ್ತೆ ಹೋರಾಟಕ್ಕೆ ಮುಂದಾಗಲಾಗಿದೆ. ಆಸ್ಪತ್ರೆಯ ಮುಂಭಾಗದಲ್ಲಿ ಪ್ರತಿಭಟನೆ ನಡೆಸದೆ, ರೋಗಿಗಳಿಗೆ ತೊಂದರೆಯಾಗದಂತೆ ಉದ್ಯಾನವನದ ಬಳಿ ಶಾಂತಿಯುತ ಪ್ರತಿಭಟನೆ ನಡೆಸಲಾಗುವುದು ಎಂದು ಯಡಹಳ್ಳಿ ಮಂಜುನಾಥ್ ತಿಳಿಸಿದರು.

ಸಾಮಾಜಿಕ ಹೋರಾಟಗಾರ ಯೂನಸ್ ಮಾತನಾಡಿ, ಕೇವಲ 4 ರಿಂದ 5 ಲಕ್ಷ ರೂ.ನಷ್ಟು ವೆಚ್ಚದಲ್ಲಿ ದುರಸ್ತಿ ಮಾಡಬಹುದಾದ ಅಥವಾ ಬದಲಾಯಿಸಬಹುದಾದ ಸ್ಕ್ಯಾನಿಂಗ್ ಯಂತ್ರವನ್ನು ಒಂಬತ್ತು ವರ್ಷಗಳಿಂದ ಸ್ಥಗಿತದಲ್ಲಿಟ್ಟಿರುವುದು ಆಡಳಿತ ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ಸಾಕ್ಷಿಯಾಗಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಸೌಲಭ್ಯವಿಲ್ಲದ ಕಾರಣ ಬಡವರು ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸಬೇಕಾಗಿದ್ದು, ಪ್ರತಿ ಸ್ಕ್ಯಾನಿಂಗ್‌ಗೆ 1,200 ರಿಂದ 1,800 ರೂ.ವರೆಗೆ ಶುಲ್ಕ ಪಾವತಿಸಬೇಕಾಗಿದೆ. ಒಂದು ವೇಳೆ ಗುರುವಾರದ ಪ್ರತಿಭಟನೆಗೆ ಸ್ಪಂದನೆ ದೊರೆಯದಿದ್ದರೆ ಅನಿರ್ದಿಷ್ಟಾವಧಿ ಧರಣಿ ತೀವ್ರಗೊಳಿಸುವುದಾಗಿ ಎಚ್ಚರಿಸಿದರು.

ಸ್ಕ್ಯಾನಿಂಗ್ ಯಂತ್ರವನ್ನು ದುರಸ್ತಿ ಮಾಡುವುದರ ಜತೆಗೆ ಅಗತ್ಯವಿದ್ದರೆ ಹೊಸ ಯಂತ್ರ ಅಳವಡಿಸಿ, ರೇಡಿಯಾಲಜಿಸ್ಟ್ ಸೇರಿದಂತೆ ಅಗತ್ಯ ವೈದ್ಯಕೀಯ ಸಿಬ್ಬಂದಿಯನ್ನು ನೇಮಕ ಮಾಡಬೇಕು. ಯಂತ್ರಕ್ಕಾಗಿ ಸೂಕ್ತ ಕೊಠಡಿ ಹಾಗೂ ನಿರ್ವಹಣಾ ವ್ಯವಸ್ಥೆ ಕಲ್ಪಿಸಬೇಕು ಎಂದು ಅರ್ಚನಾ ಜಯಂತ್ ಆಗ್ರಹಿಸಿದರಲ್ಲದೆ, ಸ್ಕ್ಯಾನಿಂಗ್ ಸೌಲಭ್ಯ ಕೇವಲ ಗರ್ಭಿಣಿಯರಿಗೆ ಮಾತ್ರವಲ್ಲದೆ ಅಪೆಂಡಿಕ್ಸ್, ಫೈಬ್ರಾಯ್ಡ್ ಗರ್ಭಕೋಶದ ಸಮಸ್ಯೆಗಳು, ವಿವಿಧ ಗ್ರೋತ್‌ಗಳು ಹಾಗೂ ಹಲವು ಆರೋಗ್ಯ ಸಮಸ್ಯೆಗಳ ಪತ್ತೆಗೂ ಅಗತ್ಯವಾಗಿದೆ ಎಂದು ಅವರು ಹೇಳಿದರು.

## ಹೆಚ್‌ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು ವಾಗ್ದಾನ

# ದಾಖಲೆಗಳಿಲ್ಲದಿದ್ದರೂ ಹೈನುಗಾರಿಕೆಗೆ ಸಾಲ

• ಪ್ರಜೋದಯ ವರದಿ

**ಹಗರೆ:** ಸಾಲ ಸೌಲಭ್ಯದಿಂದ ವಂಚಿತರಾಗಿರುವ ರೈತರಿಗೆ ಹೈನುಗಾರಿಕೆಗಾಗಿ ಯಾವುದೇ ದಾಖಲೆಗಳಿಲ್ಲದಿದ್ದರೂ 1 ಲಕ್ಷದಿಂದ 1.50 ಲಕ್ಷದವರೆಗೆ ಸಾಲ ನೀಡಲು ತೀರ್ಮಾನಿಸಲಾಗಿದೆ ಎಂದು ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಧ್ಯಕ್ಷ ಸೋಮನಹಳ್ಳಿ ನಾಗರಾಜು ಅವರು ಹೇಳಿದರು.



ಮಲ್ಲಾಪುರ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಾನು ಬ್ಯಾಂಕ್ ಅಧ್ಯಕ್ಷರಾದ ಬಳಿಕ ಬೇಲೂರು ತಾಲ್ಲೂಕಿನಲ್ಲಿ ರೈತರಿಗೆ ನೀಡಲಾಗುತ್ತಿದ್ದ ಸಾಲದ ಪ್ರಮಾಣವನ್ನು 50 ಕೋಟಿಯಿಂದ 150 ಕೋಟಿಗೆ ಹೆಚ್ಚಿಸಲಾಗಿದೆ. ಅಲ್ಲದೆ, ಎಫ್‌ಐಡಿ ನೋಂದಣಿ ಮಾಡಲಾಗಿದೆ ಎಂದು ತಿಳಿಸಿದರು.

ಏಪ್ರಿಲ್ 1ರಿಂದ ಮಾರ್ಚ್ 31ರವರೆಗೆ ಸಹಕಾರ ಸಂಘದಲ್ಲಿ ನಡೆದಿರುವ ಎಲ್ಲಾ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆ ಮಾಡಿಸಿ, ವಾರ್ಷಿಕ ಮಹಾಸಭೆಯಲ್ಲಿ ಮಂಡಿಸಿ, ಮುಂದಿನ ಸಾಲಿನ ಹೊಸ ಯೋಜನೆಗಳಿಗೆ ಅನುಮೋದನೆ ಪಡೆಯುವುದೇ ವಾರ್ಷಿಕ ಮಹಾಸಭೆಯ ಮುಖ್ಯ ಉದ್ದೇಶವಾಗಿದೆ. ನಿಯಮದಂತೆ ಜಿಲ್ಲೆಯ ಎಲ್ಲ ಸಹಕಾರ ಸಂಘಗಳು ಸೆಪ್ಟೆಂಬರ್ 25ರೊಳಗಾಗಿ ವಾರ್ಷಿಕ ಮಹಾಸಭೆ ನಡೆಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.

ಸಹಕಾರ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರ 2021-22ನೇ ಸಾಲಿನಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯವನ್ನು ಆರಂಭಿಸಿದೆ. ಸಹಕಾರ ಬ್ಯಾಂಕ್‌ಗಳ ಮೂಲಕ ರೈತರಿಗೆ ಯಶಸ್ವಿನಿ, ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆ ಹಾಗು ಪ್ರಧಾನಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ ಸೇರಿ ವಿವಿಧ ಯೋಜನೆಗಳ ಸೌಲಭ್ಯ ತಲುಪಿಸಲಾಗುತ್ತಿದೆ ಎಂದರು.

ಬ್ಯಾಂಕ್ ನಿರ್ದೇಶಕ ಎಂ.ಎ. ನಾಗರಾಜ್ ಮಾತನಾಡಿ, ಅರೆಮಲೆನಾಡು ಪ್ರದೇಶಗಳಾದ ಹಳೇಬೀಡು ಮತ್ತು ಮಾದಿಹಳ್ಳಿ ಹೋಬಳಿಗಳ ರೈತರ ಅನುಕೂಲಕ್ಕಾಗಿ ಹೆಚ್ಚಿನ ಅನುದಾನ ನೀಡಬೇಕು ಎಂದು ಬ್ಯಾಂಕ್ ಅಧ್ಯಕ್ಷರಲ್ಲಿ ಮನವಿ ಮಾಡಿದರು.

ಸಭೆಯ ಆರಂಭದಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ಸಿಇಒ ಪುಟ್ಟಸ್ವಾಮಿ ಶೆಟ್ಟಿ ವಾರ್ಷಿಕ ವರದಿಯನ್ನು ಮಂಡಿಸಿದರು. ಸಂಘದ ಅಧ್ಯಕ್ಷ ಶ್ರೀನಿವಾಸ್, ಉಪಾಧ್ಯಕ್ಷ ಗಣೇಶ್, ನಿರ್ದೇಶಕರಾದ ಚಂದ್ರೇಗೌಡ , ಗಣೇಶಮೂರ್ತಿ, ಚಂದ್ರಶೇಖರ್, ವಿರೂಪಾಕ್ಷ, ಬ್ಯಾಂಕ್ ಹರೀಶ್ ಇನ್ನಿತರರಿದ್ದರು.

ಅರಕಲಗೂಡು ಗೌರವಾನ್ವಿತ ಪ್ರಧಾನ ಸಿವಿಲ್ ಜಡ್ಜ್ &
ಜೆ.ಎಂ.ಎಫ್.ಸಿ ರವರ ಘನ ನ್ಯಾಯಾಲಯದಲ್ಲಿ
ಸಿ.ಆರ್.ಮಿಸ್ ಸಂಖ್ಯೆ– 881/2026
ಅರ್ಜಿದಾರರು :

1) ವಿರೂಪಾಕ್ಷಮ್ಮ ಕೋಂ ಲೇಟ್ ಟಿ.ವೆಂಕಟೇಶಮೂರ್ತಿ ಸುಮಾರು 56 ವರ್ಷ,
2) ಟಿ.ಕಮಲಮ್ಮ ಕೋಂ ಲೇಟ್ ವೆಂಕಟೇಶ ಸುಮಾರು 69 ವರ್ಷ,
3) ಟಿ.ತಮ್ಮಯ್ಯ ಬಿನ್ ಲೇಟ್ ವಿ.ತಿಮ್ಮಯ್ಯ ಸುಮಾರು 67 ವರ್ಷ, # 12/818, ಶ್ರೀನಿವಾಸ, ಸುವರ್ಣನಗರ, ದೊಡ್ಡಬಿದರಕಲ್ಲು, ನಾಗಸಂದ್ರ, ಬೆಂಗಳೂರು, 560073.
4) ಟಿ. ರೇವಣ್ಣ ಬಿನ್ ಲೇಟ್ ವಿ.ತಿಮ್ಮಯ್ಯ ಸುಮಾರು 63 ವರ್ಷ, ಚೈತ್ರ ಸೌರಭ, ಸಿಂಡಿಕೇಟ್ ಬ್ಯಾಂಕ್ ಎದುರು, ಜಯನಗರ, 2ನೇ ಹಂತ, ವಿದ್ಯಾನಗರ, ಹಾಸನ.
5) ಟಿ.ಪರಮೇಶ ಬಿನ್ ಲೇಟ್ ವಿ.ತಿಮ್ಮಯ್ಯ ಸುಮಾರು 60 ವರ್ಷ,
6) ಸುಮಲತಾ ಕೋಂ ಲೇಟ್ ವೆಂಕಟೇಶ ಸುಮಾರು 45 ವರ್ಷ,

1, 2, 5 & 6ನೇ ಅರ್ಜಿದಾರರ ವಿಳಾಸ:
ಬೈರಾಪುರ ಗ್ರಾಮ, ಕಸಬಾ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ:
ಎದುರುಅರ್ಜಿದಾರರು :–ತಹಸೀಲ್ದಾರ್‌ರವರು,ಜನನ–ಮರಣ ನೋಂದಣಾಧಿಕಾರಿಗಳ ಕಛೇರಿ, ಅರಕಲಗೂಡು.

**ಪತ್ರಿಕಾ ಪ್ರಕಟಣೆ**

1ನೇ ಅರ್ಜಿದಾರರ ಮಾವನ ತಂದೆ, 2ರಿಂದ5ನೇ ಅರ್ಜಿದಾರರ ತಾತ, 6 ಅರ್ಜಿದಾರರ ಮಾವನ ತಂದೆಯವರಾದ ವೆಂಕಟಯ್ಯ ಬಿನ್ ಸಿದ್ದಯ್ಯರವರು ದಿನಾಂಕ:02/08/1991ರಂದು ಹಾಸನ ಜಿಲ್ಲೆ. ಅರಕಲಗೂಡು ತಾಲ್ಲೂಕು, ಕಸಬಾ ಹೋಬಳಿ, ಮರಡಿ ದಾಖ್ಲೆ, ಬೈರಾಪುರ ಗ್ರಾಮದ ತಮ್ಮ –ಸ್ವಗೃಹದಲ್ಲಿ ಮೃತರಾಗಿರುತ್ತಾರೆ. ಸದರಿ ರವರು ಮೃತರಾಗಿರುವ ಬಗ್ಗೆ ಮರಣ ದೃಢೀಕರಣ ಪತ್ರವನ್ನು ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಮೃತರಾದ ಬಗ್ಗೆ ಮೇಲ್ಕಂಡ ಅರ್ಜಿಯಲ್ಲಿ ಹಿತಾಸಕ್ತಿ ಉಳ್ಳವರು ಯಾರಾದರು ಇದ್ದಲ್ಲಿ ಘನ ನ್ಯಾಯಾಲಯಕ್ಕೆ ದಿನಾಂಕ:15/10/26ರ ಬೆಳಿಗ್ಗೆ 11–00 ಗಂಟೆಗೆ ನೀವಾಗಲಿ ಅಥವಾ ನಿಮ್ಮ ಪರವಾಗಿ ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಈ ಅರ್ಜಿಯನ್ನು ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

2026ನೇ ವರ್ಷದ 9 ತಿಂಗಳ 01 ದಿನಾಂಕದಂದು ಇದನ್ನು ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
(ಜಿ.ಜಿ ರವಿ)
ವಕೀಲರು, ಅರಕಲಗೂಡು
ದಿನಾಂಕ: 1–09–26

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಗೌರವಾನ್ವಿತ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಅರಕಲಗೂಡು

# ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡಿದವರು ಹಿಮ್ಸ್ ನೌಕರರಲ್ಲ

## ಹೊರಗುತ್ತಿಗೆ ಏಜೆನ್ಸಿ ವ್ಯವಸ್ಥಾಪಕ ಮಹೇಶ್ ಸ್ಪಷ್ಟನೆ

• ಪ್ರಜೋದಯ ವರದಿ

**ಹಾಸನ:** ಪ್ರಾರಂಭ ಹಂತದಲ್ಲಿರುವ ಖಾಸಗಿ ಆಸ್ಪತ್ರೆಯಲ್ಲಿ ಸ್ವಚ್ಛತಾ ಕಾರ್ಯ ನಡೆಸಿದ ನಾಲ್ವರು ಸಿಬ್ಬಂದಿ ಹಿಮ್ಸ್ ಸಂಸ್ಥೆ ನೌಕರರಲ್ಲ, ನಮ್ಮ ಏಜೆನ್ಸಿಯ ಸಿಬ್ಬಂದಿ ಎಂದು ಹಿಮ್ಸ್ ಹೊರಗುತ್ತಿಗೆ ಏಜೆನ್ಸಿ ವ್ಯವಸ್ಥಾಪಕ ಮಹೇಶ್ ಸ್ಪಷ್ಟಪಡಿಸಿದರು.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್)ಗೆ ನಿಯೋಜಿಸಲಾಗಿರುವ ಹೊರ ಗುತ್ತಿಗೆ ಸ್ವಚ್ಛತಾ ಸಿಬ್ಬಂದಿ ಖಾಸಗಿ ಆಸ್ಪತ್ರೆಯಲ್ಲಿ ತೆರಳಿ ಕರ್ತವ್ಯ ನಿರ್ವಹಿಸಿದ್ದರೂ ಯಾವುದೇ ತಪ್ಪು ಮಾಡಿಲ್ಲ. ನಮ್ಮ ಸಂಸ್ಥೆ ಖಾಸಗಿ ಸಂಸ್ಥೆಯಾಗಿದ್ದು, ಅಗತ್ಯವಿರುವ ಸರ್ಕಾರಿ ಹಾಗು ಖಾಸಗಿ ಸಂಸ್ಥೆಗಳಿಗೆ ಒಪ್ಪಂದದ ಆಧಾರದ ಮೇಲೆ ವಿವಿಧ ಸೇವೆಗಳಿಗೆ ಮಾನವ ಸಂಪನ್ಮೂಲ ಒದಗಿಸುತ್ತಿದೆ ಎಂದು ತಿಳಿಸಿದರು.

ಹಿಮ್ಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಚ್ಛತಾ ಸೇವೆಯೂ ಇದೇ ರೀತಿಯ ಒಪ್ಪಂದದಡಿ ನಡೆಯುತ್ತಿದೆ. ಆ.23ರಂದು ಬೆಳಿಗ್ಗೆ 8ರಿಂದ 10 ಗಂಟೆಯವರೆಗೆ ಎರಡು ಗಂಟೆಗಳ ಅವಧಿಗೆ ನಾಲ್ವರು ಸ್ವಚ್ಛತಾ ಸಿಬ್ಬಂದಿಯನ್ನು ಸ್ವಚ್ಛತಾ ಕಾರ್ಯಕ್ಕೆ ಕಳುಹಿಸಿಕೊಡುವಂತೆ ನಾಗರಾಜ್ ಎಂಬುವವರು ಕೋರಿದ್ದರು. ಮುಂದೆ ತಮ್ಮ ಸಂಸ್ಥೆಗೆ ಅಲ್ಲಿ ಸ್ವಚ್ಛತಾ ಕೆಲಸ ಸಿಗಲಿದೆ ಎಂಬ ಕಾರಣಕ್ಕೆ ನಾನೇ ಕಳಿಸಿದೆ ಎಂದರು.

ಹಿಮ್ಸ್‌ನಲ್ಲಿ ಸ್ವಚ್ಛತಾ ಸೇವೆಯನ್ನು ಮಾನವ ಸಂಪನ್ಮೂಲ ಸಂಖ್ಯೆ ಬದಲು, ಪ್ರತಿ ಚದರ ಮೀಟರ್‌ಗೆ ನಿಗದಿಪಡಿಸಿರುವ ಶುಲ್ಕದ ಆಧಾರದ ಮೇಲೆ ಒಪ್ಪಂದ ಮಾಡಿಕೊಂಡು ನಿರ್ವಹಿಸಲಾಗುತ್ತಿದೆ. ಮಾನವ ಸಂಪನ್ಮೂಲದಲ್ಲಿ ಕೆಲ ವ್ಯತ್ಯಾಸಗಳಾದರೂ, ಲಭ್ಯವಿರುವ ಸಿಬ್ಬಂದಿ ಹೊಂದಾಣಿಕೆ ಮಾಡಿ ಕೊಂಡು ನಿಗದಿತ ಸ್ವಚ್ಛತಾ ಕಾರ್ಯ ಪೂರ್ಣಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ಬೆಳಗಿನ ಪಾಳಿಯಲ್ಲಿ ಹಿಮ್ಸ್‌ನಲ್ಲಿ ಕರ್ತವ್ಯ ನಿಯೋಜನೆ ಇಲ್ಲದ ಮತ್ತು ಸ್ವಚ್ಛತಾ ಸೇವೆಯಲ್ಲಿ ನಾಲ್ವರು ಸಿಬ್ಬಂದಿಯನ್ನು ಖಾಸಗಿ ಸಂಸ್ಥೆಗೆ 2 ಗಂಟೆ ಅವಧಿಗೆ ಕಳುಹಿಸಲಾಗಿತ್ತು. ನಾಲ್ವರು ಸಿಬ್ಬಂದಿಯಲ್ಲಿ ಒಬ್ಬರಿಗೆ ಅಂದು ವಾರದ ರಜೆ ನೀಡಲಾಗಿತ್ತು. ಉಳಿದ ಮೂವರಿಗೆ ಮಧ್ಯಾಹ್ನ 12.30 ರಿಂದ ಆರಂಭವಾಗುವ ಎರಡನೇ ಪಾಳಿಯಲ್ಲಿ ಕರ್ತವ್ಯ ನಿಯೋಜಿಸಲಾಗಿತ್ತು. ಹೀಗಾಗಿ ಬೆಳಗಿನ ಅವಧಿಯಲ್ಲಿ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುವಾಗ ಹಿಮ್ಸ್‌ನ ಯಾವುದೇ ಕರ್ತವ್ಯಕ್ಕೆ ನಿಯೋಜಿತರಾಗಿರಲಿಲ್ಲ. ಆದ್ದರಿಂದ ಈ ವಿಚಾರಕ್ಕೂ ಹಿಮ್ಸ್ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲವೆಂದು ಸ್ಪಷ್ಟಪಡಿಸಿದರು.

ಹಿಮ್ಸ್‌ನ ಮೊದಲ ಪಾಳಿಗೆ ನಿಯೋಜಿಸಲಾಗಿದ್ದ ಸಿಬ್ಬಂದಿ ಎಂದಿನಂತೆ ಕರ್ತವ್ಯಕ್ಕೆ ಹಾಜರಾಗಿ ನಿಗದಿಪಡಿಸಿದ ಸ್ವಚ್ಛತಾ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಿದ್ದಾರೆ. ಖಾಸಗಿ ಸಂಸ್ಥೆಗೆ ತೆರಳಿದ ನಾಲ್ವರು ಸಿಬ್ಬಂದಿ ಹಿಮ್ಸ್‌ನ ನೌಕರರಲ್ಲ, ನಮ್ಮ ಏಜೆನ್ಸಿಯ ಸಿಬ್ಬಂದಿ. ಹಿಮ್ಸ್‌ನಲ್ಲಿ ಸ್ವಚ್ಛತಾ ಸೇವೆಗೆ ಯಾವುದೇ ಕೊರತೆಯಾಗಿಲ್ಲ ಎಂದು ಹೇಳಿದರು. ನೌಕರರಾದ ಲಲಿತ, ರಾಧ, ಸುಮ, ಸುನೀತ, ಸಾವಿತ್ರಿ ಅವರು ಉಪಸ್ಥಿತರಿದ್ದರು.

# ಮಹಿಳಾ ನೌಕರರ ಸಮಸ್ಯೆಗೆ ಸ್ಪಂದಿಸುವುದೇ ನಮ್ಮ ಉದ್ದೇಶ

## ರಾಜ್ಯ ಮಹಿಳಾ ಸರ್ಕಾರಿ ನೌಕರರ ಸಂಘ ರಾಜ್ಯಾಧ್ಯಕ್ಷೆ ರೋಶಿನಿಗೌಡ

• ಪ್ರಜೋದಯ ವರದಿ

**ಹಾಸನ:** ಮಹಿಳಾ ಸರ್ಕಾರಿ ನೌಕರರ ಸಮಸ್ಯೆಗಳಿಗೆ ಸ್ಪಂದಿಸುವುದು, ಮಹಿಳೆಯರ ಸಬಲೀಕರಣಕ್ಕೆ ಒತ್ತು ನೀಡುವ ಉದ್ದೇಶದಿಂದ ಅಖಿಲ ಕರ್ನಾಟಕ ರಾಜ್ಯ ಮಹಿಳಾ ಸರ್ಕಾರಿ ನೌಕರರ ಸಂಘ ಕಾರ್ಯ ನಿರ್ವಹಿಸುತ್ತಿದೆ ಎಂದು ಸಂಘದ ರಾಜ್ಯಾಧ್ಯಕ್ಷೆ ರೋಶಿನಿಗೌಡ ಅವರು ತಿಳಿಸಿದರು.



ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಿಳಾ ನೌಕರರ ಸೇವಾ ಹಕ್ಕುಗಳ ಕುರಿತು ಅರಿವು ಮೂಡಿಸುವುದು, ಕಾನೂನು ನೆರವು ಒದಗಿಸುವುದು ಹಾಗು ಕಾರ್ಯಕ್ಷೇತ್ರದಲ್ಲಿ ಎದುರಾಗುವ ಕಿರುಕುಳ ಮತ್ತು ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಸಂತ್ರಸ್ತರ ಪರವಾಗಿ ಧ್ವನಿ ಎತ್ತುವುದು ಸಂಘದ ಪ್ರಮುಖ ಉದ್ದೇಶವಾಗಿದೆ. ಈಗಾಗಲೇ ನಾವು ರಾಜ್ಯದ 18 ಜಿಲ್ಲೆಗಳಲ್ಲಿ ಪ್ರವಾಸ ಮಾಡಿದ್ದು, ಶೀಘ್ರವೇ ಹಾಸನ ಜಿಲ್ಲೆಯಲ್ಲೂ ನಮ್ಮ ಜಿಲ್ಲಾ ಶಾಖೆ ಉದ್ಘಾಟನೆ ಆಗಲಿದೆ ಎಂದು ತಿಳಿಸಿದರು.

ಸರ್ಕಾರಿ ಕಚೇರಿಗಳಲ್ಲಿ ಮಹಿಳಾ ನೌಕರರು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಪುರುಷ ಪ್ರಧಾನ ಸಂಘಟನೆಗಳಲ್ಲಿ ಮಹಿಳಾ ಸಮಸ್ಯೆಗಳಿಗೆ ಸೂಕ್ತ ಆದ್ಯತೆ ದೊರೆಯುತ್ತಿಲ್ಲ. ಈ ಹಿನ್ನಲೆ ರಾಜ್ಯದ 2.50 ಲಕ್ಷಕ್ಕೂ ಅಧಿಕ ಸರ್ಕಾರಿ ಮಹಿಳಾ ನೌಕರರನ್ನು ಒಂದೇ ವೇದಿಕೆಯಡಿ ಒಗ್ಗೂಡಿಸಿ, ಅವರ ಹಕ್ಕು ಮತ್ತು ಬೇಡಿಕೆಗಳಿಗಾಗಿ ಸಂಘಟಿತವಾಗಿ ಹೋರಾಟ ನಡೆಸಲಾಗುತ್ತಿದೆ ಎಂದರು.

ಋತುಚಕ್ರ ರಜೆ ನಮ್ಮ ಸಾಧನೆಯಾಗಿದ್ದು, ರಾಜ್ಯ ಸರ್ಕಾರ ಕೂಡಲೇ 8ನೇ ವೇತನ ಆಯೋಗ ರಚಿಸಬೇಕು, ಎನ್‌ಪಿಎಸ್ ರದ್ದುಗೊಳಿಸಿ ಓಪಿಎಸ್ ಜಾರಿಗೊಳಿಸಬೇಕು. ಮಾತೃತ್ವ ರಜೆಯನ್ನು ಒಂದು ವರ್ಷದವರೆಗೆ ವಿಸ್ತರಿಸಬೇಕು. ಗರ್ಭಿಣಿ ಸರ್ಕಾರಿ ನೌಕರರಿಗೆ ವೈದ್ಯಕೀಯ ಪರೀಕ್ಷೆಗಾಗಿ ಪ್ರತಿ ತಿಂಗಳು ಒಂದು ದಿನ ವೇತನ ಸಹಿತ ರಜೆ ನೀಡಬೇಕು. ಸೆ.13 ರಂದು ಮೇರಿ ದೇವಾಸಿಯಾ ಅವರ ಜನ್ಮದಿನವನ್ನು ಮಹಿಳಾ ಸರ್ಕಾರಿ ನೌಕರರ ದಿನ ಎಂದು ಘೋಷಿಸಬೇಕು. ಮಹಿಳಾ ನೌಕರರಿಗೆ ನೀಡುವ ಹಬ್ಬದ ಮುಂಗಡ ಮೊತ್ತವನ್ನು 50 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಒತ್ತಾಯಿಸಿದರು.

ಸಂಘದ ರಾಜ್ಯ ಖಜಾಂಚಿ ಡಾ.ವೀಣಾ ಕೃಷ್ಣಮೂರ್ತಿ, ಜಿಲ್ಲಾಧ್ಯಕ್ಷೆ ಆಶಾ, ಪದಾಧಿಕಾರಿಗಳಾದ ನಿರುಪಮಾಗೌಡ, ನೇತ್ರಾವತಿ, ಸುಜಾತ ಹಾಜರಿದ್ದರು.

ಅರಕಲಗೂಡು ಗೌರವಾನ್ವಿತ ಪ್ರಧಾನ ಸಿವಿಲ್ ಜಡ್ಜ್ &
ಜೆ.ಎಂ.ಎಫ್.ಸಿ ರವರ ಘನ ನ್ಯಾಯಾಲಯದಲ್ಲಿ
ಸಿ.ಆರ್.ಮಿಸ್ ಸಂಖ್ಯೆ– 882/2026
ಅರ್ಜಿದಾರರು :

1) ವಿರೂಪಾಕ್ಷಮ್ಮ ಕೋಂ ಲೇಟ್ ಟಿ.ವೆಂಕಟೇಶಮೂರ್ತಿ ಸುಮಾರು 56 ವರ್ಷ,
2) ಟಿ.ಕಮಲಮ್ಮ ಕೋಂ ಲೇಟ್ ವೆಂಕಟೇಶ ಸುಮಾರು 69 ವರ್ಷ,
3) ಟಿ.ತಮ್ಮಯ್ಯ ಬಿನ್ ಲೇಟ್ ವಿ.ತಿಮ್ಮಯ್ಯ ಸುಮಾರು 67 ವರ್ಷ, # 12/818, ಶ್ರೀನಿವಾಸ, ಸುವರ್ಣನಗರ, ದೊಡ್ಡಬಿದರಕಲ್ಲು, ನಾಗಸಂದ್ರ, ಬೆಂಗಳೂರು, 560073.
4) ಟಿ. ರೇವಣ್ಣ ಬಿನ್ ಲೇಟ್ ವಿ.ತಿಮ್ಮಯ್ಯ ಸುಮಾರು 63 ವರ್ಷ, ಚೈತ್ರ ಸೌರಭ, ಸಿಂಡಿಕೇಟ್ ಬ್ಯಾಂಕ್ ಎದುರು, ಜಯನಗರ, 2ನೇ ಹಂತ, ವಿದ್ಯಾನಗರ, ಹಾಸನ.
5) ಟಿ.ಪರಮೇಶ ಬಿನ್ ಲೇಟ್ ವಿ.ತಿಮ್ಮಯ್ಯ ಸುಮಾರು 60 ವರ್ಷ,
6) ಸುಮಲತಾ ಕೋಂ ಲೇಟ್ ವೆಂಕಟೇಶ ಸುಮಾರು 45 ವರ್ಷ,

1, 2, 5 & 6ನೇ ಅರ್ಜಿದಾರರ ವಿಳಾಸ:
ಬೈರಾಪುರ ಗ್ರಾಮ, ಕಸಬಾ ಹೋಬಳಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ:
ಎದುರುಅರ್ಜಿದಾರರು :–ತಹಸೀಲ್ದಾರ್‌ರವರು,ಜನನ–ಮರಣ ನೋಂದಣಾಧಿಕಾರಿಗಳ ಕಛೇರಿ, ಅರಕಲಗೂಡು.

**ಪತ್ರಿಕಾ ಪ್ರಕಟಣೆ**

1ನೇ ಅರ್ಜಿದಾರರ ಮಾವನ ತಾಯಿ, 2ರಿಂದ5ನೇ ಅರ್ಜಿದಾರರ ಅಜ್ಜಿ, 6ನೇ ಅರ್ಜಿದಾರರ ಮಾವನ ತಾಯಿಯವರಾದ ಸಣ್ಣಮ್ಮ ಕೋಂ ವೆಂಕಟಯ್ಯರವರು ದಿನಾಂಕ:–05/07/1980ರಂದು ಹಾಸನ ಜಿಲ್ಲೆ. ಅರಕಲಗೂಡು ತಾಲ್ಲೂಕು, ಕಸಬಾ ಹೋಬಳಿ, ಮರಡಿ ದಾಖ್ಲೆ, ಬೈರಾಪುರ ಗ್ರಾಮದ ತಮ್ಮ –ಸ್ವಗೃಹದಲ್ಲಿ ಮೃತರಾಗಿರುತ್ತಾರೆ. ಸದರಿ ರವರು ಮೃತರಾಗಿರುವ ಬಗ್ಗೆ ಮರಣ ದೃಢೀಕರಣ ಪತ್ರವನ್ನು ಕೋರಿ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಮೃತರಾದ ಬಗ್ಗೆ ಮೇಲ್ಕಂಡ ಅರ್ಜಿಯಲ್ಲಿ ಹಿತಾಸಕ್ತಿ ಉಳ್ಳವರು ಯಾರಾದರು ಇದ್ದಲ್ಲಿ ಘನ ನ್ಯಾಯಾಲಯಕ್ಕೆ ದಿನಾಂಕ:– 15/10/26ರ ಬೆಳಿಗ್ಗೆ 11–00 ಗಂಟೆಗೆ ನೀವಾಗಲಿ ಅಥವಾ ನಿಮ್ಮ ಪರವಾಗಿ ನಿಮ್ಮ ವಕೀಲರ ಮೂಲಕವಾಗಲಿ ಹಾಜರಾಗತಕ್ಕದ್ದು. ತಪ್ಪಿದ್ದಲ್ಲಿ ಈ ಅರ್ಜಿಯನ್ನುಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

2026ನೇ ವರ್ಷದ 9 ತಿಂಗಳ 01 ದಿನಾಂಕದಂದು ಇದನ್ನು ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.

ಅರ್ಜಿದಾರರ ಪರ ವಕೀಲರು
(ಜಿ.ಜಿ ರವಿ)
ವಕೀಲರು, ಅರಕಲಗೂಡು
ದಿನಾಂಕ: 1–09–26

ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಗೌರವಾನ್ವಿತ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಅರಕಲಗೂಡು

# ಚ.ರಾ.ಪಟ್ಟಣ ಗುತ್ತಿಗೆದಾರರ ಸಂಘದಿಂದ 2 ಲ.ರೂ. ನೆರವು



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಇತ್ತೀಚೆಗೆ ನಿಧನರಾದ ತಾಲ್ಲೂಕು ಗುತ್ತಿಗೆದಾರರ ಸಂಘದ ಸದಸ್ಯ ಪರಮ ಎನ್. ಕೃಷ್ಣೇಗೌಡ ಅವರ ಕುಟುಂಬಕ್ಕೆ ಸಂಘದಿಂದ 2 ಲಕ್ಷ ರೂಪಾಯಿಗಳ ಮರಣವಂತಿಕೆ ಮೊತ್ತದ ಚೆಕ್ ಅನ್ನು ವಿತರಿರಿಸುವ ಮೂಲಕ ಕುಟುಂಬದವರಿಗೆ ಧೈರ್ಯ ತುಂಬಿದರು.

ಪರಮ ಎನ್.ಕೃಷ್ಣೇಗೌಡರ ನಿಧನಕ್ಕೆ ಸಂತಾಪ ಸೂಚಿಸಿದ ಸಂಘದ ಪದಾಧಿಕಾರಿಗಳು, ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿ ಮೃತರ ಪತ್ನಿ ಸುನಂದಮ್ಮ ಅವರಿಗೆ ಚೆಕ್ ಹಸ್ತಾಂತರಿಸಿದರು. ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್.ಬಿ.ಜಗದೀಶ್ ಅವರು ಕುಟುಂಬಸ್ಥರಿಗೆ ಸಾಂತ್ವನ ಹೇಳಿದರಲ್ಲದೆ, ಭಗವಂತನು ದುಃಖ ಭರಿಸುವ ಶಕ್ತಿಯನ್ನು ಭರಿಸಲೆಂದು ಪ್ರಾರ್ಥಿಸಿದರು.

ಸಂಘದ ಕಾರ್ಯಕಾರಿ ಮಂಡಳಿ ಅಧ್ಯಕ್ಷ ಸಿ.ಬಿ.ಗಂಗಾಧರ್, ಗೌರವಾಧ್ಯಕ್ಷ ಬಿ.ಹೆಚ್.ಶಿವಣ್ಣ, ಕಾರ್ಯದರ್ಶಿ ಶಿವರಾಜ್, ಖಜಾಂಚಿ ಎನ್.ಬಿ. ಸೋಮಶೇಖರ್, ಉಪಾಧ್ಯಕ್ಷ ಎ. ಜೆ.ಲಕ್ಕೇಗೌಡ, ಹೆಚ್.ಎನ್.ರವಿ, ಸಹ ಕಾರ್ಯದರ್ಶಿ ಎನ್.ನಿಂಗೇಗೌಡ, ನಿರ್ದೇಶಕರಾದ ಚೆಲುವೇಗೌಡ, ಜಯಶಂಕರ್, ಸುಬ್ಬೇಗೌಡ ಇನ್ನಿತರರು ಹಾಜರಿದ್ದರು.

## ಲೀಸ್ ಪ್ರದೇಶ ಮೀರಿ ಅಕ್ರಮ ಗಣಿಗಾರಿಕೆ: 10 ಕೋ.ರೂ. ನಷ್ಟ ಆರೋಪ

# ಜಂಟಿ ಸರ್ವೆ ನಡೆಸಿ ತನಿಖೆ ಕೈಗೊಳ್ಳಲು ಒತ್ತಾಯ

• ಪ್ರಜೋದಯ ವರದಿ

**ಬೇಲೂರು:** ಹಳೇಬೀಡು ಹೋಬಳಿಯ ಸಿದ್ದಾಪುರ ಗ್ರಾಮದ ಸರ್ವೆ ನಂ.73ರಲ್ಲಿ ಮಂಜೂರಾಗಿರುವ ಹಸಿರು ಅಲಂಕಾರಿಕ ಶಿಲೆ ಕ್ವಾರಿ ಲೀಸ್ ವ್ಯಾಪ್ತಿಯನ್ನು ಮೀರಿ ಸರ್ಕಾರಿ ಹಾಗೂ ಇತರೆ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ನಡೆಸಲಾಗುತ್ತಿದೆ ಎಂದು ಕೆಡಿಪಿ ಸದಸ್ಯ ಚೇತನ್ ಸಿ.ಗೌಡ ಆರೋಪಿಸಿದರು.




ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದಾಪುರ ಗ್ರಾಮದ ಸರ್ವೆ ನಂ.73ರಲ್ಲಿ ಸುಮಾರು ನಾಲ್ಕು ಎಕರೆ ಪ್ರದೇಶದಲ್ಲಿ ಕ್ವಾರಿ ನಡೆಸಲು ಲೀಸ್ ಮಂಜೂರಾಗಿದ್ದು, ಲೀಸ್ ಪ್ರದೇಶದ ಹೊರತಾಗಿಯೂ ಹಾರುಬಿಹಳ್ಳಿ ಗ್ರಾಮದ ಸರ್ಕಾರಿ ಜಮೀನು ಸೇರಿದಂತೆ 10 ಎಕರೆಗೂ ಹೆಚ್ಚು ಪ್ರದೇಶವನ್ನು ಗಣಿಗಾರಿಕೆ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗಿದೆ ಎಂಬ ಆರೋಪವಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು ₹10 ಕೋಟಿಗೂ ಹೆಚ್ಚು ನಷ್ಟವಾಗಿದೆ ಎಂದು ಅವರು ತಿಳಿಸಿದರು.

ಕ್ವಾರಿ ರಸ್ತೆ ನಿರ್ಮಾಣ, ಯಂತ್ರೋಪಕರಣಗಳ ಸಂಚಾರ, ಕಲ್ಲು ಸಂಗ್ರಹ ಹಾಗೂ ತ್ಯಾಜ್ಯ ವಿಲೇವಾರಿ ಸೇರಿದಂತೆ ವಿವಿಧ ಚಟುವಟಿಕೆಗಳಿಗೆ ಲೀಸ್ ವ್ಯಾಪ್ತಿಯ ಹೊರಗಿನ ಜಮೀನುಗಳನ್ನು ಬಳಸಿಕೊಳ್ಳಲಾಗಿದೆ. ಕೃಷಿ ಜಮೀನನ್ನು ಸಂಬಂಧಪಟ್ಟ ಪ್ರಾಧಿಕಾರಗಳ ಪೂರ್ವಾನುಮತಿ ಹಾಗೂ ಭೂ ಪರಿವರ್ತನೆ ಆದೇಶವಿಲ್ಲದೆ ಗಣಿಗಾರಿಕೆ ಅಥವಾ ವಾಣಿಜ್ಯ ಉದ್ದೇಶಗಳಿಗೆ ಬಳಸಲಾಗಿದೆಯೇ ಎಂಬುದನ್ನೂ ಅಧಿಕಾರಿಗಳು ಪರಿಶೀಲಿಸಬೇಕು ಎಂದು ಒತ್ತಾಯಿಸಿದರು.

ಅಕ್ರಮ ಗಣಿಗಾರಿಕೆಯಿಂದಾಗಿ ಹಲವು ಮನೆಗಳ ಗೋಡೆಗಳು ಬಿರುಕು ಬಿಟ್ಟಿರುವುದನ್ನು ಕಾಣಬಹುದು ಎಂದರು.

**ಜಂಟಿ ಸರ್ವೆಗೆ ಆಗ್ರಹ**

ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಂದಾಯ ಹಾಗೂ ಭೂಮಾಪನ ಇಲಾಖೆಯ ಅಧಿಕಾರಿಗಳು ಜಂಟಿಯಾಗಿ ಸ್ಥಳ ಪರಿಶೀಲನೆ ನಡೆಸಬೇಕು. ಡಿಜಿಪಿಎಸ್ ಅಥವಾ ಟೋಟಲ್ ಸ್ಟೇಷನ್ ಸರ್ವೆ ಮೂಲಕ ಕ್ವಾರಿ ಲೀಸ್‌ನ ನಿಖರ ಗಡಿಯನ್ನು ಗುರುತಿಸಿ, ಲೀಸ್ ವ್ಯಾಪ್ತಿಯ ಹೊರಗೆ ಗಣಿಗಾರಿಕೆ ನಡೆದಿದೆಯೇ ಎಂಬುದನ್ನು ಸ್ಪಷ್ಟಪಡಿಸಬೇಕು ಎಂದು ಚೇತನ್ ಸಿ.ಗೌಡ ಆಗ್ರಹಿಸಿದರು.

ಸಿದ್ದಾಪುರ ಹಾಗೂ ಹಾರುಬಿಹಳ್ಳಿ ಗ್ರಾಮದ ಸಾರ್ವಜನಿಕರು ಮತ್ತು ಅಕ್ಕಪಕ್ಕದ ಜಮೀನು ಮಾಲೀಕರ ಸಮ್ಮುಖದಲ್ಲೇ ಸರ್ವೆ ನಡೆಸಬೇಕು. ಸರ್ಕಾರಿ ಜಮೀನು ಅತಿಕ್ರಮಣವಾಗಿದ್ದರೆ ಅದನ್ನು ಗುರುತಿಸಿ, ಸಂಬಂಧಪಟ್ಟವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

**ನಷ್ಟದ ಹಣ ವಸೂಲಿ ಮಾಡಬೇಕು**

ಅಕ್ರಮ ಗಣಿಗಾರಿಕೆ ನಡೆದಿರುವುದು ತನಿಖೆಯಲ್ಲಿ ದೃಢಪಟ್ಟರೆ, ಹೊರತೆಗೆಯಲಾದ ಖನಿಜದ ಪ್ರಮಾಣವನ್ನು ವೈಜ್ಞಾನಿಕವಾಗಿ ಅಂದಾಜಿಸಿ ಸರ್ಕಾರಕ್ಕೆ ಉಂಟಾಗಿರುವ ನಷ್ಟವನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಬೇಕು. ಅಕ್ರಮ ಚಟುವಟಿಕೆಗೆ ಬಳಸಿರುವ ಯಂತ್ರೋಪಕರಣಗಳು ಹಾಗೂ ವಾಹನಗಳ ವಿರುದ್ಧವೂ ಕಾನೂನು ಪ್ರಕಾರ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ತನಿಖೆ ಪೂರ್ಣಗೊಳ್ಳುವವರೆಗೆ ಯಾವುದೇ ಅಕ್ರಮ ಗಣಿಗಾರಿಕೆ ಹಾಗೂ ಖನಿಜ ಸಾಗಾಣಿಕೆ ನಡೆಯದಂತೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು. ಆರೋಪಗಳು ಸಾಬೀತಾದಲ್ಲಿ ಕ್ವಾರಿ ಲೀಸ್ ಅಮಾನತು ಅಥವಾ ರದ್ದುಪಡಿಸುವ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

''ಸರ್ಕಾರಿ ಭೂಮಿ ಹಾಗೂ ಸಾರ್ವಜನಿಕ ಖನಿಜ ಸಂಪತ್ತನ್ನು ರಕ್ಷಿಸುವುದು ಇಲಾಖೆಯ ಜವಾಬ್ದಾರಿಯಾಗಿದೆ. ಅಧಿಕಾರಿಗಳು ನಮ್ಮ ಮನವಿಗೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು, ಅಗತ್ಯವಿದ್ದಲ್ಲಿ ಕರ್ನಾಟಕ ಹೈಕೋರ್ಟ್ ಮೊರೆ ಹೋಗಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆಡಿಪಿ ಸದಸ್ಯ ನವೀನ್ ಹಾಗೂ ಗ್ರಾಮಸ್ಥರಾದ ನಂಜೇಶ್ ಮತ್ತು ಜಗದೀಶ್ ಉಪಸ್ಥಿತರಿದ್ದರು.

